International Journal of Kannada Research
www.kannadajournal.com

ISSN: 2454–5813
IJKR 2020; 6(2): 34-40
© 2020 IJKR
www.kannadajournal.com
Received: 20-02-2020
Accepted: 22-03-2020

**ಪೃಥ್ವಿರಾಜ ಟಿ.**
ಸಂಶೋಧನಾ ವಿದ್ಯಾರ್ಥಿ,
ಸಮೂಹ ಸಂವಹನ ಮತ್ತು
ಪತ್ರಿಕೋದ್ಯಮ ವಿಭಾಗ,
ಮಾನಸಗಂಗೋತ್ರಿ, ಮೈಸೂರು
ವಿಶ್ವವಿದ್ಯಾನಿಲಯ, ಮೈಸೂರು

**Corresponding Author:**
**ಪೃಥ್ವಿರಾಜ ಟಿ.**
ಸಂಶೋಧನಾ ವಿದ್ಯಾರ್ಥಿ,
ಸಮೂಹ ಸಂವಹನ ಮತ್ತು
ಪತ್ರಿಕೋದ್ಯಮ ವಿಭಾಗ,
ಮಾನಸಗಂಗೋತ್ರಿ, ಮೈಸೂರು
ವಿಶ್ವವಿದ್ಯಾನಿಲಯ, ಮೈಸೂರು

# ಸಿನಿಮಾಗಳಲ್ಲಿ ಬರಗೂರು ರಾಮಚಂದ್ರಪ್ಪನವರ ದೃಷ್ಟಿಕೋನ – ಒಂದು ವಿಶ್ಲೇಷಣಾತ್ಮಕ ಅಧ್ಯಯನ

**ಪೃಥ್ವಿರಾಜ ಟಿ.**

**ಸಂಶೋಧನಾ ಲೇಖನದ ಸಾರಾಂಶ**

ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಸೇವೆ ಸಲ್ಲಿಸಿರುವವರಲ್ಲಿ ಬರಗೂರು ರಾಮಚಂದ್ರಪ್ಪನವರು ಪ್ರಮುಖವಾಗಿ ನಿಲ್ಲುತ್ತಾರೆ. ಸಿನಿಮಾ ಕ್ಷೇತ್ರ ಕೇವಲ ಒಂದು ಉದ್ಯಮವಲ್ಲ ಅಥವಾ ಕಲೆಯಲ್ಲ. ಅದೊಂದು ಕಲೋದ್ಯಮ ಎಂದು ಹೇಳಿದವರು ಬರಗೂರರು. ಸಿನಿಮಾವನ್ನು ಒಂದು ಚಳುವಳಿಯ ಅಸ್ತವಾಗಿ ಕೂಡ ಬಳಕೆ ಮಾಡಿಕೊಂಡಿದ್ದಾರೆ. ಬರಗೂರು ರಾಮಚಂದ್ರಪ್ಪನವರು ತಮ್ಮ ಸಿನಿಮಾಗಳಲ್ಲಿ ತಮ್ಮದೇ ಆದಂತಹ ಶೈಲಿಯನ್ನು ಅಳವಡಿಸಿಕೊಂಡಿದ್ದು ಇತರ ನಿರ್ದೇಶಕರಿಗಿನ್ನ ಭಿನ್ನವಾಗಿ ನಿಲ್ಲುತ್ತಾರೆ. ಕನ್ನಡದ ಬಂಡಾಯ ಸಾಹಿತಿಯಾಗಿ ಮಾತ್ರವಲ್ಲದೆ ಒಬ್ಬ ಸೃಜನಶೀಲ ನಿರ್ದೇಶಕರಾಗಿ ಅನೇಕ ಪ್ರಯೋಗಾತ್ಮಕ ಚಿತ್ರಗಳನ್ನು ನೀಡಿದ್ದಾರೆ. ಒಬ್ಬ ಯಶಸ್ವಿ ನಿರ್ದೇಶಕರಾಗಿ ಬರಗೂರರು 'ಒಂದು ಊರಿನ ಕಥೆ', 'ಬೆಂಕಿ', 'ಸೂರ್ಯ', 'ಕೋಟೆ', 'ಕರಡಿಪುರ', 'ಕ್ಷಾಮ', 'ಹಗಲುವೇಷ', 'ಶಾಂತಿ', 'ಜನಪದ', 'ಏಕಲವ್ಯ', 'ಉಗ್ರಗಾಮಿ', 'ಶಬರಿ', 'ಭಾಗೀರತಿ', 'ಭೂಮಿತಾಯಿ', 'ಅಂಗುಲಿಮಾಲಾ', 'ಮರಣದಂಡನೆ', 'ಬೆಕ್ಕು' ಚಿತ್ರಗಳನ್ನು ನಿರ್ದೇಶನ ಮಾಡಿದ್ದಾರೆ. ತಮ್ಮ ಸಿನಿಮಾಗಳಲ್ಲಿ ಹೆಚ್ಚು ದೈವಾಧಿಕಾರ, ಧರ್ಮಾಧಿಕಾರ, ಜ್ಞಾನಾಧಿಕಾರ, ಪುರುಷಾಧಿಕಾರ, ಮತ್ತು ರಾಜ್ಯಾಧಿಕಾರಗಳ ಶೊಷಣೆಯ ಬಗ್ಗೆ ಬೆಳಕು ಚಲ್ಲಿದ್ದು ತಮ್ಮದೇ ಆದ ದೃಷ್ಟಿಕೋನವನ್ನು ಹೋಂದಿದ್ದಾರೆ. ಧೈವಾಧಿಕಾರ ಮತ್ತು ಧರ್ಮಾಧಿಕಾರದ ಮೂಲಕ ಮುಗ್ದಜನರಿಗಾಗುವ ಅನ್ಯಯಗಳು, ಜ್ಞಾನಾಧಿಕಾರವನ್ನ ಹುಟ್ಟಿನಿಂದ ಬಂದಿರುವಂತೆ ಬಿಂಬಿಸಿ ಸಮಾಜವನ್ನು ಸವಾರ್ಥಕ್ಕಾಗಿ ಬಳಕೆ ಮಾಡಿಕೊಳ್ಳುವುದು ಮತ್ತು ಮೂಢನಂಬಿಕೆಯ ವಿರುದ್ಧ ಮೂಡಿಸಿರುವ ಜಾಗೃತಿ ಬಗ್ಗೆ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಸಾಹಿತ್ಯ ಮತ್ತು ಚಲನಚಿತ್ರಗಳಲ್ಲಿ ತುಳಿತಕ್ಕೊಳಗಾದವರು ಮತ್ತು ಶೋಷಿತರ ಪರವಾಗಿ ಚಿತ್ರ ನಿರ್ಮಾಣ ಮಾಡಿದ್ದು, ಈ ಚಿತ್ರಗಳಲ್ಲಿ ಸಾಮಾಜಿಕ ಸ್ಥಿತಿಗತಿ, ಮೂಢನಂಬಿಕೆ, ನಿರಂತರವಾಗಿ ನಡೆಯುತ್ತಿರುವ ಹೆಣ್ಣಿನ ಶೋಷಣೆ ಬಗ್ಗೆ ಬೆಳಕು ಚೆಲ್ಲಲಾಗಿದೆ. ಈ ನಿಟ್ಟಿನಲ್ಲಿ ಇವರ ಕೆಲವು ಆಯ್ದ ಚಿತ್ರಗಳನ್ನು ಅಧ್ಯಯನ ಮಾಡಿ ಅದರಲ್ಲಿನ ವಸ್ತುವಿಷಯವನ್ನು ವಿಶ್ಲೇಷಣಾತ್ಮಕವಾಗಿ ಈ ಸಂಶೋಧನಾ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ. ಬೇಟೆಗಾಗಿ ಇವರನ್ನೆಲ್ಲಾ ಕಾಡಿಗೆ ಹೋಗೋಣವೆಂದು ಕರೆದೊಯ್ದು ದಾರಿನಡುವೆ ಭಗವತಿಯನ್ನು

**ಪೀಠಿಕೆ**

ಪ್ರಸ್ತುತ ಸಿನಿಮಾ ನಿರ್ದೇಶಕರು ಲಾಭ ಮಾಡುವ ಉದ್ದೇಶದಿಂದ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದು ಅದರಲ್ಲಿ ನೈತಿಕತೆಗೆ ಹೆಚ್ಚು ಒತ್ತು ನೀಡುತ್ತಿಲ್ಲ. ಆಧುನೀಕ ತಂತ್ರಜ್ಞಾನ ಹಾಗೂ ಗ್ರಾಫಿಕ್ ಲೋಕವು ಪ್ರೇಕ್ಷಕನಿಗೆ ಮನರಂಜನೆಯನ್ನು ಮಾತ್ರ ನೀಡುತ್ತವೆ ಹೊರತು ಅಲೋಚನೆ, ಚಿಂತನೆಗೆ ಒಳಪಡುವುದಿಲ್ಲ. ತಂತ್ರಜ್ಞಾನ ಮತ್ತು ಗ್ರಾಫಿಕ್‌ಗಳ ಅಳವಡಿಕೆಯಿಂದ ನಿರ್ದೇಶಕರ ಕಲ್ಪನೆ ತಕ್ಕ ರೀತಿಯಲ್ಲಿ ಚಿತ್ರಗಳನ್ನ ಚಿತ್ರಿಸುತ್ತಾರೆ. ಜನಪ್ರಿಯ ಚಿತ್ರಗಳು ವಾಸ್ತಾವಿಕತೆಯನ್ನು ಪ್ರೇಕ್ಷಕನಿಗೆ ಮರೆಮಾಚಿಸುತ್ತವೆ. ಆದರೆ ಕಲಾತ್ಮಕ ಸಿನಿಮಾಗಳು ನೋಡುಗರಲ್ಲಿ ತಲ್ಲಣವನ್ನು ಉಂಟುಮಾಡುತ್ತವೆ. ಜನಸಾಮಾನ್ಯರ ಜೀವನದ ವಾಸ್ತಾವಿಕತೆಯನ್ನು ಚಿತ್ರಿಸುತ್ತಾರೆ. ಆಧುನಿಕ ಜನಪ್ರಿಯ ಸಿನಿಮಾಗಳಿಗೂ ಮತ್ತು ಕಲಾತ್ಮಕ ಚಿತ್ರಗಳಲ್ಲಿ ಇರುವ ವಿಭಿನ್ನತೆಗಳನ್ನು ಕಾಣುತ್ತೇವೆ. ಕಲಾತ್ಮಕ ಸಿನಿಮಾಗಳು ವಾಸ್ತಾವಿಕತೆಯನ್ನು ಜನಸಾಮಾನ್ಯರಿಗೆ ಅರಿವು ಮೂಡಿಸುವ ಪ್ರಯತ್ನವಾಗಿ ಹಲವು ಸಾಹಿತಿಗಳು, ಅನೇಕ

ಸಿನಿಮಾಗಳನ್ನ ವಾಸ್ತಾವಿಕ ನೆಲೆಯಲ್ಲಿ ನಿರ್ಮಿಸಿದ್ದಾರೆ. ಹಾಗೇಯೇ ವಾಸ್ತಾವಿಕತೆಯ ಅಂಶಗಳನ್ನು ಚಿತ್ರಗಳ ಮೂಲಕ ಅನಕ್ಷರಸ್ಥರಿಗೂ ಅರಿವು ಮೂಡಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತಿಗಳು, ಕವಿಗಳು, ನಿರ್ದೇಶಕರು ಆಗಿರುವ ಬರಗೂರು ರಾಮಚಂದ್ರಪ್ಪನವರು ಕಲಾತ್ಮಕ ಸಿನಿಮಾಗಳ ಮೂಲಕ ಬುಡಕಟ್ಟು ಜನಾಂಗದವರ ಜೀವನ ಕ್ರಮ ತಳಸಮುದಾಯದ ಜನರ ಮೇಲೆ ನಡೆಸುವ ದೌರ್ಜನ್ಯ, ದಬ್ಬಾಳಿಕೆ, ಸ್ತ್ರೀಯ ಮೇಲಿನ ಶೋಷಣೆಯನ್ನು ಕುರಿತಾಗಿ ಹಲವು ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ. ಅನಾದಿಕಾಲದಿಂದಲೂ ಈ ಜಗತನ್ನು ಆಳುತ್ತಿರುವ 5 ಅಧಿಕಾರ ವರ್ಗಗಳಾದ ಧರ್ಮ, ದೈವಾ, ಜ್ಞಾನ, ಪುರುಷ, ರಾಜ್ಯ ಇವುಗಳನ್ನ ಪ್ರಶ್ನಿಸುವುದು ಮತ್ತು ಇವುಗಳಿಂದ ಪರಿವರ್ತನೆಯಾಗುವುದು ಬರಗೂರುರು ರಾಮಚಂದ್ರಪ್ಪನವರ ಸಿನಿಮಾದ ಪ್ರಮುಖ ದೃಷ್ಟಿಕೋನವಾಗಿದೆ. ಬರಗೂರುರವರ ಸಿನಿಮಾಗಳಲ್ಲಿನ ಮೌಢ್ಯತೆ, ಅಸ್ಪೃಷ್ಯತೆ, ಜೀತಪದ್ದತಿ, ಸಾಮಾಜಿಕ ಆಚರಣೆ ಬಂಡವಾಳಶಾಹಿ, ಪುರೋಹಿತಶಾಹಿ ಕುರಿತಾದ ಸಂಗತಿಗಳನ್ನು ಅವರ ಸಿನಿಮಾಗಳಲ್ಲಿ ಅಧ್ಯಯನ ಮಾಡುತ್ತಿದ್ದೇವೆ. ನನ್ನ ಅಧ್ಯಯನದ ದೃಷ್ಟಿಯಿಂದ ಬರಗೂರುರವರ ಸಿನಿಮಾಗಳಾದ ಶಬರಿ, ಕೋಟೆ, ಸೂರ್ಯ, ಕರಡಿಪುರ, ಹಗಲುವೇಷ ಸಿನಿಮಾಗಳ ಕುರಿತಾಗಿ ಅಧ್ಯಯನ ನಡೆಸುತ್ತಿದ್ದು ಈ ಸಿನಿಮಾಗಳಲ್ಲಿ ಕಂಡು ಬರುವ ಅಸ್ಪಶ್ಯತೆ, ಜೀತಪದ್ದತಿ, ಗುಲಾಮಗಿರಿ ಪದ್ದತಿ, ಸಾಮಾಜಿಕ ಆಚರಣೆಗಳು, ಬಂಡವಾಳಶಾಹಿ, ಪುರೋಹಿತಶಾಹಿ, ಜಮೀನ್ದಾರಿ ಪದ್ದತಿ ಸಂಗತಿಗಳು ತಳಸಮುದಾಯದ ಮೇಲೆ ಹೇಗೆಲ್ಲಾ ದಬ್ಬಾಳಿಕೆ, ದೌರ್ಜನ್ಯ ಶೋಷಣೆ ಮಾಡಿವೆ ಎಂಬುದರ ಬಗ್ಗೆ ಈ ಅಧ್ಯಯನದಿಂದ ತಿಳಿಯಬಹುದಾಗಿದೆ.

### ಬರಗೂರು ರಾಮಚಂದ್ರಪ್ಪನವರ ಬದುಕು ಬರಹ

ಕನ್ನಡದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿರುವ ಬಹುಮುಖ ಪ್ರತಿಭೆ, ಇವರು ಬಂಡಾಯ ಸಾಹಿತ್ಯ ಚಳುವಳಿಯ ನೇತಾರರಾಗಿ, ಬಂಡಾಯ ಸಾಹಿತ್ಯ ಸಂಘಟನೆಯ ಸಂಘಟಕರಾಗಿ, ವೃತ್ತಿಯಲ್ಲಿ ಅಧ್ಯಾಪಕರಾಗಿ ಪ್ರವೃತ್ತಿಯಲ್ಲಿ ಸೃಜನಶೀಲ ಸಾಹಿತಿ ಹಾಗೂ ಯಶಸ್ವಿ ಸಿನಿಮಾ ನಿರ್ದೇಶಕರಾಗಿ ಇತರರಿಗಿಂತ ಭಿನ್ನವಾದ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ. ತಮ್ಮ ಸಾಹಿತ್ಯ ಕೃಷಹಿಯಲ್ಲಿ ಬರಗೂರುರವರು ಅನೇಕ ಕಾದಂಬರಿ, ಕವನಸಂಕಲನ, ನಾಟಕಗಳನ್ನು ಬರೆದಿದ್ದು ತಮ್ಮ ಕಾದಂಬರಿ ಆಧಾರಿತವಾಗಿ ಸಿನಿಮಾಗಳನ್ನು ಕೂಡ ನಿರ್ದೇಶನ ಮಾಡಿದ್ದಾರೆ. ಇವರ ಸಾಹಿತ್ಯ ಕೃಷಿಗೆ ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರು ರಾಯಚೂರಿನಲ್ಲಿ ನಡೆದ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯದ ಸಮ್ಮೇಳನ ಅಧ್ಯಕ್ಷರು ಆಗಿದ್ದರು. ಬರಗೂರು ರಾಮಚಂದ್ರ ಅವರ ಹೆಸರಿನ ಭಾಗವಾಗಿರುವ ಬರಗೂರು ಎಂಬ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಒಂದು ಹಳ್ಳಿ ತಮ್ಮ ಹೆಸರಿನೊಂದಿಗೆ ತಾವು ಹುಟ್ಟಿದ ಹಳ್ಳಿಯನ್ನು ಜಗತ್ತಿಗೆ ಪರಿಚಯಿಸಿದ್ದಾರೆ. ಇವರ ತಾಯಿ–ಕೆಂಚಮ್ಮ ಮತ್ತು ತಂದೆ–ರಂಗದಾಸಪ್ಪ ಅವರ 9 ಜನ ಮಕ್ಕಳಲ್ಲಿ ಒಬ್ಬರಾಗಿದ್ದು 1946 ಅಕ್ಟೋಬರ್ 18 ರಂದು ಜನಿಸಿದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಬರಗೂರಿನಲ್ಲೆ ಪಡೆದು ನಂತರ ತುಮಕೂರಿನಲ್ಲಿ ಬಿ.ಎ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ ಪದವಿಯನ್ನು ಪಡೆದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕರಾಗಿ 30 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ತಾವು ಸಲ್ಲಿಸಿರುವ ಸಾಹಿತ್ಯ ಕ್ಷೇತ್ರದ ಸೇವೆಗಾಗಿ ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಗೌರವಗಳನ್ನು ಪಡೆದುಕೊಂಡಿರುವ ಇವರು ಸಿನಿಮಾ ಕ್ಷೇತ್ರದ ಸೇವೆಗಾಗಿ ಅಂತರಾಷ್ಟ್ರೀಯ ಮಟ್ಟದ ಗೌರವಗಳನ್ನು ಗಳಿಸಿದ್ದು, ಕನ್ನಡ ಚಿತ್ರರಂಗವನ್ನ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸುವಂತೆ ಮಾಡಿದ್ದಾರೆ.

### ಸಮೂಹ ಸಂವಹನ ಮತ್ತು ಕಲಾತ್ಮಕ ಮಾಧ್ಯಮವಾಗಿ ಸಿನಿಮಾ

ಸಿನಿಮಾ ಎನ್ನುವುದು ಒಂದು ಕಲಾತ್ಮಕ ಸಮೂಹ ಸಂವಹನ ಮಾಧ್ಯಮ ಎಂದರೆ ತಪ್ಪಾಗಲಾರದು. ಆಧುನಿಕ ಸಿನಿಮಾ ಮಾಧ್ಯಮವು ಒಂದು ಮಾರುಕಟ್ಟೆಯಾಗಿದ್ದು, ಇದರಲ್ಲಿ ಕೆಲವರಿಗೆ ವ್ಯವಹಾರದ ಅಂಶ ವಿಷಯವಾಗಿಯೂ ಇನ್ನೂ ಕೆಲವರಿಗೆ ಮನೋರಂಜನೆಯಾಗಿ ಇನ್ನೂ ಕೆಲವರಿಗೆ ಕಲಾತ್ಮಕ ಮಾಧ್ಯಮವಾಗಿ ಕಾಣುತ್ತದೆ. ಭಾರತದಲ್ಲಿ ಸಿನಿಮಾ ಸ್ವತಂತ್ರ ಕಲೆಯಾಗಿ ಸ್ಥಾನ ಪಡೆದಿದ್ದು ಸತ್ಯಜಿತ್‌ರಾಯ್ ಅವರಿಂದ ನಂತರದ ಕಳೆದ ನಲವತ್ತು ವರ್ಷಗಳಲ್ಲಿ ಸಿನಿಮಾ ಕಲಾತ್ಮಕ ಅಭಿವ್ಯಕ್ತಿಯಾಗಿ ಹಲವಾರು ಪ್ರಯೋಗಗಳನ್ನು ಕಂಡಿತ್ತು. ಸಾಹಿತ್ಯ, ನಾಟಕ, ಸಿನಿಮಾ, ಭಾಷೆಗಳಲ್ಲಿ ಕಲಾತ್ಮಕವಾದ ಕೃತಿಗಳನ್ನು ಸೃಷ್ಟಿಸುವುದಾಗಲಿ ಅಸ್ವಾದಿಸುವುದಾಗಲಿ ಕಷ್ಟ ಸಾಧ್ಯ. ಚಲನಚಿತ್ರವನ್ನು ಮಾಡುವುದೆಂದರೆ ಪಂಚೇದ್ರಿಯಗಳ ಮೂಲಕ ದಕ್ಕುವ ಅನುಭವವನ್ನು ಕಣ್ಣು–ಕಿವಿಗಳ ಪಾತಳಿಯಲ್ಲಿ ಒಂದಾಗಿಸಿ ಕಲ್ಪಿತ ವಾಸ್ತಾವವನ್ನಾಗಿ ಅನುಭವಿಸುವಂತೆ ನಿರ್ಮಿಸುವುದು ಈ ಸೌಲಭ್ಯ ಉಳಿದ ಕಲಾ ಪ್ರಕಾರಗಳಿಗೆ ಇಲ್ಲ ಎನ್ನುವುದೇ ಸಿನಿಮಾದ ಹೆಗ್ಗಳಿಕೆಯಾಗಿದೆ. ಚಲನಚಿತ್ರಗಳಲ್ಲಿ ಕಥಾಕೇಂದ್ರಿತ, ಪಾತ್ರಕೇಂದ್ರಿತ, ವಸ್ತುಕೇಂದ್ರಿತ, ಚಿಂತನಾಕೇಂದ್ರಿತ, ಸಾಹಿತ್ಯಕೇಂದ್ರಿತ ಎಂಬ ಅನೇಕ ಬಗೆಯ ಸಿನಿಮಾಗಳನ್ನು ಕಾಣುತ್ತೇವೆ ಪ್ರತಿಯೊಂದು ಕಲಾ ಪ್ರಕಾರಕ್ಕೂ ಅದರದೇ ಆದ ಭಾಷೆ, ವ್ಯಾಕರಣ, ಸೌಂದರ್ಯ, ಮೀಮಾಂಸೆ ಇದೆ. ಚಲನಚಿತ್ರ ನಿರ್ದೇಶಕ ಕೇವಲ ಚಿತ್ರದ ನಿರ್ದೇಶಕ ಮಾತ್ರವಲ್ಲ ಸಮಾಜದ ಬಗ್ಗೆ ಕಾಳಜಿಯನ್ನು ಜವಾಬ್ದಾರಿಯುತ ವ್ಯಕ್ತಿಯಾಗಿರಬೇಕು. ಚಿತ್ರದ ಮೂಲಕ ಮನರಂಜನೆಯನ್ನು ನೀಡುವುದಷ್ಟೇ ಅಲ್ಲ ಪ್ರೇಕ್ಷಕರಲ್ಲಿ ಸದಭಿರುಚಿಯನ್ನು ಬೆಳೆಸಲು ನಿರ್ದೇಶಕ ಯತ್ನಿಸಬೇಕು ಚಿತ್ರದ ಮೂಲಕ ಸಾಧ್ಯವಾದಷ್ಟರ ಮಟ್ಟಿಗೆ ಪ್ರೇಕ್ಷಕರನ್ನು ಸುಶಿಕ್ಷಿತರನ್ನಾಗಿಸಲೂ ಆತ ಪ್ರಯತ್ನ ಪಡಬೇಕು. ಸಿನಿಮಾವನ್ನು ಕಲಾತ್ಮಕ ಅಭಿವ್ಯಕ್ತಿಯಾಗಿ ಬಳಸುವ ಕೆಲವರು ತಮ್ಮ ಚಿತ್ರಗಳಲ್ಲಿ ಜನರಂಜನೆಯನ್ನು ಕನಿಷ್ಠ ಗುಣವನ್ನಾಗಿಸಿ ಯೋಚನೆ ಚಿಂತನೆ ಸಂವಾದ ಮುಂತಾದ ಬೌದ್ಧಿಕ ತಾತ್ವಿಕ ಅನ್ವೇಷಣೆಯನ್ನು ಗರಿಷ್ಟತನ ಉದ್ದೇಶವನ್ನಾಗಿಸಿ ಸಿನಿಮಾವನ್ನು ಒಂದು ಕಲಾಕೃತಿಯನ್ನಾಗಿ ನಿರ್ಮಿಸುತ್ತಾರೆ. ಸಿನಿಮಾ ಮಾಧ್ಯಮವು ದಿನದಿಂದ ದಿನಕ್ಕೆ ಹೆಚ್ಚು ಜನಪ್ರಿಯ ಮಾಧ್ಯಮವಾಗಿ ಬೆಳೆಯುತ್ತಾ ಬಂದಿದೆ. ಸಾಮಾಜಿಕ ಸಮಸ್ಯೆಗಳು ವರ್ತನೆಗಳನ್ನು ಜನಸಮುದಾಯಕ್ಕೆ ತಿಳಿಸುವ ಪ್ರಯತ್ನವನ್ನು ಕಲಾತ್ಮಕ ಸಿನಿಮಾ ಮಾಧ್ಯಮ ಮಾಡುತ್ತದೆ. ಹಾಗಾಗಿಯೇ ಬರಗೂರು ರಾಮಚಂದ್ರಪ್ಪನವರು ಸಿನಿಮಾ ಮಾಧ್ಯಮದ ಕುರಿತು "ಜನಸಮುದಾಯದ ಜೊತೆಗಿನ ಸಂಬಂಧವನ್ನು ಗಮನಿಸಿದಾಗ ಸಿನಿಮಾ ನಿಜವಾದ ಅರ್ಥದಲ್ಲಿ ಸಮೂಹ ಮಾಧ್ಯಮ. ಸಿನಿಮಾ ಒಂದು ಉದ್ಯಮವೂ ಆಗಿದೆ. ಆದ್ದರಿಂದ ಅದನ್ನು ಸಂಸ್ಕೃತಿಯ ಭಾಗವಲ್ಲ ಎಂದು ಹೇಳಲಾಗದು. ಅಸಂಖ್ಯಾತ ಜನಸಾಮಾನ್ಯರು ಪ್ರೀತಿಸುವ ಕಾರಣಕ್ಕಾಗಿ ಜನಪ್ರಿಯ ಸಂಸ್ಕೃತಿಯ ಭಾಗವಾದ ಸಿನಿಮಾವನ್ನು ಜನಪ್ರಿಯ ಎಂಬ ಕಾರಣಕ್ಕಾಗಿ ಅಗ್ಗದ ಪ್ರಕಾರವೆಂದು ತುಚ್ಛೀಕರಿಸಲಾಗದು. ಜನಪ್ರಿಯ ಸಂಸ್ಕೃತಿಯನ್ನು ಗಂಭೀರವಾಗಿ ಪರಿಗಣಿಸಿ ಅದನ್ನು ಜನಪರ ಸಂಸ್ಕೃತಿಯಾಗಿ ಜೀವಂತವಾಗಿಡುವ ಹೊಣೆಗಾರಿಕೆಯೂ ಬೌದ್ಧಿಕ ವಲಯದ ಮೇಲಿದೆ" ಎಂದಿದ್ದಾರೆ. ಆ ಮೂಲಕ ಸಿನಿಮಾ ಮಾಧ್ಯಮದ ಪ್ರಭಾವವನ್ನು ಬಹಳ ವಿಸ್ತಾರವಾಗಿ ವಿವರಿಸಿರುವ ಅವರು ಸಿನಿಮಾ ಒಂದು ಕಲೆಯೂ ಹೌದು ಉದ್ಯಮವೂ ಹೌದು

ಹಾಗಾಗಿ ಸಿನಿಮಾ ಒಂದು ಕಲೋದ್ಯಮ ಎಂದು ಹೇಳಿದ್ದಾರೆ.

**ಅಧ್ಯಯನದ ಉದ್ದೇಶ ಹಾಗೂ ಪ್ರಾಮುಖ್ಯತೆ**

ತಮ್ಮದೇ ಶೈಲಿಯ ಸಿನಿಮಾಗಳ ನಿರ್ದೇಶನದಲ್ಲಿ ಹೆಸರು ಮಾಡಿರುವ ಬರಗೂರು ರಾಮಚಂದ್ರಪ್ಪನವರು ತಮ್ಮ ಚಿತ್ರಗಳಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದು, ತಮ್ಮದೇ ದೃಷ್ಟಿಕೋನದಲ್ಲಿ ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ. ಇವರ ಚಿತ್ರಗಳಲ್ಲಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಮಾಜದಲ್ಲಿರುವ ತಾರತಮ್ಯತೆ, ಆಚರಣೆ ಹೆಸರಿನಲ್ಲಿ ದೈವಾಧಿಕಾರ, ಧರ್ಮಾಧಿಕಾರ, ಜ್ಞಾನಾಧಿಕಾರ, ಪುರುಷಾಧಿಕಾರ, ರಾಜ್ಯಾಧಿಕಾರ,ದ ಸೋಗಿನ್ನಲಿ ಸಮಾಜದಲ್ಲಿನ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಆ ಮೂಲಕ ಸಿನಿಮಾದಲ್ಲೂ ಬಂಡಾಯ ವಸ್ತುವನ್ನು ತೋರಿಸಿದ್ದಾರೆ. ಇವರು ತಮ್ಮ ಶಬರಿ, ಕೋಟೆ, ಸೂರ್ಯ, ಕರಡಿಪುರ, ಹಗಲುವೇಷ ಸಿನಿಮಾಗಳ ಕುರಿತಾಗಿ ಅಧ್ಯಯನ ನಡೆಸುತ್ತಿದ್ದು ಈ ಸಿನಿಮಾಗಳಲ್ಲಿ ಕಂಡು ಬರುವ ಅಸ್ಪೃಶ್ಯತೆ, ಜೀತಪದ್ದತಿ, ಗುಲಾಮಗಿರಿ ಪದ್ದತಿ, ಸಾಮಾಜಿಕ ಆಚರಣೆಗಳು, ಬಂಡವಾಳಶಾಹಿ, ಪುರೋಹಿತಶಾಹಿ, ಜಮೀನ್ದಾರಿ ಪದ್ದತಿ ಸಂಗತಿಗಳು ತಳಸಮುದಾಯದ ಮೇಲೆ ಹೇಗೆಲ್ಲಾ ದಬ್ಬಾಳಿಕೆ, ದೌರ್ಜನ್ಯ ಶೋಷಣೆ ಮಾಡಿವೆ. ಈ ಮಾರ್ಗದ ತಳಸಮುದಾಯದ ಸಂಕಷ್ಟಗಳನ್ನು ಜೀವನಕ್ರಮವನ್ನು ಬದುಕಿನ ಚಿತ್ರಣವನ್ನು ಸಿನಿಮಾಗಳ ಮೂಲಕ ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ತಳಸಮುದಾಯಗಳ ಕೆಳವರ್ಗದವರು ದೈವದ, ಧರ್ಮದ, ಜ್ಞಾನದ ಹೆಸರಿನಲ್ಲಿ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಯನ್ನು ಮಾಡಿದ್ದಾರೆ. ಇವುಗಳಿಂದ ತಳಸಮುದಾಯವು ಮುಕ್ತವಾಗಿಸುವುದು ಹಾಗೂ ದೈವಾಧಿಕಾರ, ಧರ್ಮಾಧಿಕಾರ, ಜ್ಞಾನಾಧಿಕಾರ, ಪುರುಷಾಧಿಕಾರ, ರಾಜ್ಯಾಧಿಕಾರಗಳನ್ನು ಪ್ರಶ್ನಿಸುವುದು ಹಾಗೂ ಇವುಗಳಿಂದ ಹೊರಬರುವುದು ಬರಗೂರುರವರ ಸಿನಿಮಾಗಳಲ್ಲಿ ಮೂಡಿಬಂದಿದೆ. ಬರಗೂರು ರಾಮಚಂದ್ರಪ್ಪನವರು ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಲ್ಲಿ ಹಾಗೂ ಮೂಢನಂಬಿಕೆ, ಆಚರಣೆಗಳ ವಿರುದ್ಧ ಸಿನಿಮಾ ಮೂಲಕ ಧ್ವನಿ ಎತ್ತಿದ್ದಾರೆ. ಇವರ ಚಿತ್ರಗಳಲ್ಲಿ ಸಮಾಜದಲ್ಲಿ ಅಸ್ಥಿತ್ವದಲ್ಲಿರುವ ಸಾಮಾಜಿಕ ಅಸಮಾನತೆ ವಿರುದ್ಧ ಎತ್ತಿರುವ ಧ್ವನಿಯನ್ನು ಅಧ್ಯಯನ ಮಾಡಲಾಗಿದೆ. ಧಾರ್ಮಿಕತೆ ಹೆಸರಿನಲ್ಲಿ ನಡೆಯುವ ಶೊಷಣೆಯನ್ನು ಅಧ್ಯಯನ ಮಾಡಲಾಗಿದೆ.

**ಬರಗೂರು ಸಿನಿಮಾಗಳಲ್ಲಿನ ಮೌಢ್ಯತೆ ವಿರುದ್ಧದ ಜಾಗೃತಿ**

ಬರಗೂರು ರಾಮಚಂದ್ರಪ್ಪನವರು ಸಿನಿಮಾವನ್ನು ಹೋರಾಟದ ಅಸ್ತ್ರವನ್ನಾಗಿ ಬಳಕೆ ಮಾಡಿಕೊಂಡಿದ್ದು ತಮ್ಮ ಸಿನಿಮಾದ ಮೂಲಕ ಸಮಾಜದಲ್ಲಿನ ಅನೇಕ ಅನಿಷ್ಟ ಪದ್ಧತಿಗಳು ಮತ್ತು ಮೌಢ್ಯತೆಯ ವಿರುದ್ಧ ಗ್ರಾಮೀಣರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಪುರೋಹಿತಶಾಹಿ ವರ್ಗವು ದೈವದ, ಧರ್ಮದ ಹೆಸರಿನಲ್ಲಿ ಕೆಳವರ್ಗದ ಜನತೆಯ ಮೇಲೆ ಒತ್ತಾಯ ಪೂರ್ವಕವಾಗಿ ಏರುತ್ತಿದ್ದಾರೆ. ಬರಗೂರುರವರು ಇಂತಹ ಪರಿಸ್ಥಿತಿಯನ್ನು ಕಂಡು ಇವುಗಳಿಂದ ಜನರು ದೂರಾಗಬೇಕು ಎಂಬ ಹಿನ್ನೆಲೆಯಲ್ಲಿ ಅನಕ್ಷರಸ್ಥರು ಕೂಡ ಅರಿವು ಬೆಳೆಸಿಕೊಳ್ಳಬೇಕು ಎನ್ನುವ ಸಲುವಾಗಿ ಸಿನಿಮಾಗಳ ಮೂಲಕ ಅನಿಷ್ಠ ಪದ್ಧತಿಗಳನ್ನು ತಮ್ಮ ಚಿತ್ರಗಳಲ್ಲಿ ಚಿತ್ರಿಸಿದ್ದಾರೆ. ಬರಗೂರುರರ ಸಿನಿಮಾಗಳಲ್ಲಿ ನಾವು ಅಸ್ಪೃಶ್ಯತೆ, ಜೀತಪದ್ಧತಿ, ಗುಲಾಮಗಿರಿ ಪದ್ಧತಿ, ಸಾಮಾಜಿಕ ಆಚರಣೆಗಳಾದ ಕೂಡಿಕೆ ಪದ್ಧತಿ, ಹಾಗೂ ಸ್ತ್ರೀಯು ಋತುಮತಿಯಾದಾಗ ಊರಿಂದಾಚೆ ಹಿಡುವ ಪದ್ದತಿ ಹೀಗೆ ಇನ್ನು ಅನೇಕ ಮೌಢ್ಯತೆಯ ಸಂಗತಿಗಳನ್ನು ಬರಗೂರುರವರು ಸಿನಿಮಾಗಳಲ್ಲಿ ಕಾಣುತ್ತೇವೆ.

**ಅಸ್ಪೃಶ್ಯತೆ ಬಗ್ಗೆ ಜಾಗೃತಿ**

ಬರಗೂರು ರಾಮಚಂದ್ರಪ್ಪರವರು ಗ್ರಾಮೀಣ ಪ್ರದೇಶದ ಜನಪದ ಸಂಸ್ಕೃತಿಯನ್ನು ಅನಾವರಣಗೊಳಿಸುವುದು ಅವರ ಮುಖ್ಯ ಉದ್ದೇಶವಾಗಿದೆ. ಇವರು ತಳಸಮುದಾಯದ ಜನರಲ್ಲಿ ಸಂಕಷ್ಟಗಳನ್ನು ಮೂಕ ಸಂವೇದನೆಗಳನ್ನು ಬರವಣಿಗೆಯ ಮೂಲಕ ಕಥೆ, ಕಾದಂಬರಿ, ಕವನ, ಸಂಕಲನಗಳ ಮೂಲಕ ಹೊರಹಾಕುವುದರ ಜೊತೆಗೆ ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಇವರು ನಿರ್ದೇಶಿರುವ ಸಿನಿಮಾಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಅವೈಜ್ಞಾನಿಕ ಆಚರಣೆಯನ್ನು ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಬರಗೂರು ನಿರ್ದೇಶಿಸಿರುವ ಹಲವು ಸಿನಿಮಾಗಳಲ್ಲಿ ಅನಾದಿಕಾಲದಿಂದ ನಡೆಸಿಕೊಂಡು ಬಂದ ಅಸ್ಪೃಶ್ಯತೆ ಆಚರಣೆಯನ್ನು ಚಿತ್ರಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಳಜಾತಿಯ ಜನತೆಯ ಮೇಲೆ ದೈವಾಧಿಕಾರದ, ಧರ್ಮಾಧಿಕಾರದ ಹೆಸರಿನಲ್ಲಿ ಊರಲ್ಲಿ ಇರುವ ಕೊಳ, ಬಾವಿ, ನಳ, ಮುಟ್ಟುವಂತಿಲ್ಲ ಹಾಗೆಯೇ ದೇವಾಲಯಗಳ ಪ್ರವೇಶಿಸುವಂತಿಲ್ಲ. ಬರಗೂರುರವರು ನಿರ್ದೇಶಿಸಿದ "ಕೋಟೆ" ಸಿನಿಮಾದಲ್ಲಿ ಇಂತಹ ಒಂದು ಅಸ್ಪೃಶ್ಯತೆಯ ಆಚರಣೆಯನ್ನು ನೋಡುತ್ತೇವೆ. ಈ ಕೋಟೆ ಸಿನಿಮಾವು ಹಾಡಿನ ಮೂಲಕ ಅಮೌಖಿಕವಾದ ಸಿನಿವಾದರೂ ಅಲ್ಲಿನ ಅಸ್ಪೃಶ್ಯತೆಯ ಆಚರಣೆಯೂ ಸ್ಪಷ್ಟವಾಗಿಯೇ ಕಾಣಿಸುತ್ತದೆ. ಪುರಾಣದ ರಾಮಾಯಣ ಕತೆಯೊಂದಿಗೆ ಜನಸಾಮಾನ್ಯರ ಕೆಳವರ್ಗದ ಜನಜೀವನವನ್ನು ನಂಬುವ ರೀತಿಯಲ್ಲಿ ಹಾಡಿನ ಮೂಲಕ ಈ ಕೋಟೆ ಸಿನಿಮಾವನ್ನು ಚಿತ್ರಿಸಿದ್ದಾರೆ. ಸಾಮಾನ್ಯ ಅರ್ಥದಲ್ಲಿ ಕೋಟೆ ಎಂದರೆ "ಭದ್ರತೆ, ರಕ್ಷಣೆ" ಎಂಬರ್ಥ ಇದೆ. ಶತ್ರುಗಳಿಂದ ಜನರ ಜೀವ ರಕ್ಷಣೆ ಹಾಗೂ ಅವರ ಯೋಗಕ್ಷೇಮವನ್ನು ಕಾಪಾಡುವುದು ರಾಜರ ಕೋಟೆಯಾದರೆ ಬರಗೂರುರವರು ಚಿತ್ರಿಸಿರುವ ಈ ಕೋಟೆ ಸಿನಿಮಾವು "ದಿಗ್ಬಂಧನ" ಎನ್ನುವ ರೀತಿಯಲ್ಲಿ ತೋರಿಸಿದ್ದಾರೆ. ಈ ಸಿನಿಮಾವು ಪ್ರತಿ ಹಂತದಲ್ಲಿಯೂ ಅಸ್ಪುಶ್ಯತೆ ಹಾಗೂ ಜಾತಿಯತೆಯನ್ನು ತೋರಿಸುವ ಒಂದು ಚಿತ್ರವಾಗಿದೆ. ಬರಗೂರುರವರ ಸಿನಿಮಾದ ಕೋಟೆಯು ಮೌಢ್ಯತೆಗಳಿಂದ ಕೂಡಿದ ಆಚರಣೆಗಳನ್ನು ದಾಟದಿರುವ ಒಂದು ಅಡ್ಡಗೋಡೆಯಾಗಿ ಕಾಣುವುದು. ಮೇಲ್ವರ್ಗವು ತಳಸಮುದಾಯವನ್ನು ಕೀಳಾಗಿ ನೋಡುವುದು ಹಾಗೂ ಅಸ್ಪೃಶ್ಯತೆ ಹಾಗೂ ಗುಲಾಮಗಿರಿಯತೆಯನ್ನು ಅವಲಂಬಿತ ಚಿತ್ರವಾಗಿದೆ. ಈ ಸಿನಿಮಾವು ರಾಮ–ಸೀತೆ–ಲಕ್ಷ್ಮಣರು ಒಂದು ದಿನ ವನಸಂಚಾರಕ್ಕೆ ಬಂದಾಗ ಸೀತೆಗೆ ಬಾಯಾರಿಕೆಯಾದಾಗ ಕುಡಿಯಲು ನೀರು ಇಲ್ಲದೇ ಇದ್ದಾಗ ರಾಮನು ವರುಣನ ಮಂತ್ರ ಜಪಸಿ ಬಾಣವನ್ನು ಕಲ್ಲುಬಂಡೆಗೆ ಬಿಡುತ್ತಾನೆ. ಆ ಕಲ್ಲು ಬಂಡೆ ಸೀಳಿ ನೀರು ಉಕ್ಕಿ ಬರುತ್ತವೆ. ಈ ನೀರು ಒಂದು ತಗ್ಗಿನಲ್ಲಿ ನಿಂತಾಗ ಆ ಜಾಗದಲ್ಲಿ ಪುರೋಹಿತಶಾಹಿಯು ಒಂದು ದೇವಾಲಯವನ್ನು ನಿರ್ಮಿಸುತ್ತದೆ. ಈ ದೇವಾಲಯದ ಪಕ್ಕವೇ ಇದ್ದ ತಗ್ಗು ಪ್ರದೇಶವನ್ನು "ಕೊಳ" ಎಂಬುದಾಗಿ ರಾಮ–ಸೀತೆ–ಲಕ್ಷ್ಮಣರ ಹೆಸರಿನಲ್ಲಿ ಬಿಂಬಿತವಾಗುವುದು. ಈ ಕೊಳದ ನೀರನ್ನು ಕೆಳವರ್ಗದವರು ಮುಟ್ಟುವಂತಿಲ್ಲ ಎಂಬುದಾಗಿ ಕಟ್ಟುಕಥೆಯನ್ನು ಕಟ್ಟಿರುತ್ತಾರೆ ಹಾಗೇ ದೈವದ ಹೆಸರಿನಲ್ಲಿ ತಳಸಮುದಾಯವನ್ನು ಶೋಷಣೆಗೆ ಒಳಪಡಿಸುತ್ತಾರೆ. ಈ ಕೊಳದ ನೀರನ್ನು ಮುಟ್ಟಿದರೇ "ರಕ್ತಕಾರಿ" ಮರಣ ಹೊಂದುತ್ತಾರೆ. ಎಂಬ ಸುಳ್ಳುವಾಕ್ಯವನ್ನೇ ದೇವರ ವಾಕ್ಯವಾಗಿ ನಂಬಿರುತ್ತಾರೆ. ಈ ಸಿನಿಮಾದಲ್ಲಿ ಅಸ್ಪುಶ್ಯತೆಗೆ ಒಳಗಾದ ಒಂದು ಕೆಳವರ್ಗದ ಕುಟುಂಬವನ್ನು ನೊಡುತ್ತೇವೆ. ಈ ಕುಟುಂಬದಲ್ಲಿನ ಹೆಣ್ಣನ್ನು ಊರಿನ ಪುರೋಹಿತ ಮತ್ತು ಗೌಡನೂ ಭೋಗಿಸುವ ಬಯಕೆಯಲ್ಲಿ ಜಾತಿಯನ್ನು ಲೆಕ್ಕಿಸದೇ ಪುರೋಹಿತನ್ನು ಹೆಣ್ಣಿನ ಕೈ ಹಿಡಿಯುವುದು ಹಾಗೂ ಗೌಡನು ಅಸ್ಪುಶ್ಯತೆ ಹೆಣ್ಣು

ಎನ್ನದೇ ಶೀಲವನ್ನು ಅವಮಾನಿಸುವುದು ನೋಡಬಹುದು. ಆ ಕೀಳುಜಾತಿಯ ಹೆಣ್ಣನ್ನು ಭೋಗಿಸಬೇಕು ಎನ್ನುವ ಪುರೋಹಿತ ಆಕೆಯ ಗಂಡ ಬೆಟ್ಟದ ಮೇಲಿಂದ ಬಿದ್ದಾಗ ಆತನನ್ನು ಮೇಲೆತ್ತದೆ ಕೆಳಜಾತಿಯವನೆಂದು ಅಮಾನವೀಯವಾಗಿ ನಡೆದುಕೊಳ್ಳುತ್ತಾನೆ. ಕೋಟೆ ಸಿನಿಮಾದಲ್ಲಿ ಅಸ್ಪೃಶ್ಯತೆಯನ್ನು ಬಿಂಬಿಸುತ್ತಾ ಹಾಗೂ ಸ್ತ್ರೀಯ ಮೇಲೆ ಶೋಷಣೆ ಅತ್ಯಾಚಾರವನ್ನು ಮಾಡುತ್ತದೆ. ಮೇಲ್ವರ್ಗವೂ ಕೆಳವರ್ಗದವರೂ ಬಡತನ, ಹಸಿವೂ, ಇದ್ದರೂ ಅವಮಾನಕ್ಕೆ ಅಂಜಿ ಭಯಗೊಂಡು ಸಾವಿಗೆ ಶರಣನಾಗುತ್ತಾರೆ ಹೊರತು ಎದುರಿಸಿ ನಿಲ್ಲುವ ಧೈರ್ಯ, ಬಿಕ್ಕಟ್ಟು ಇಲ್ಲದೇ ಇರುವುದು ಅಸ್ಪೃಶ್ಯತೆ ಆಚರಣೆಯು ಇನ್ನೂ ಹಲವು ಕಡೆ ಗ್ರಾಮೀಣ ಪ್ರದೇಶಗಳಲ್ಲಿ ಹೀನಾಯಾವಾಗಿ ನೋಡುವುದು ಬಳಸಿಕೊಳ್ಳುವುದನ್ನು ನೊಡಬಹುದು. ಅಸ್ಪೃಶ್ಯತೆಯ ಆಚರಣೆಯನ್ನು ದೈವದ ಮತ್ತು ಧರ್ಮದ ಹೆಸರಿನಲ್ಲಿ ಮೇಲ್ವರ್ಗ ಮಾಡುತ್ತದೆ. ತಳಸಮುದಾಯದವರು ಸಮಯಕ್ಕೆ ಒಗ್ಗೂಡದೇ ಎಲ್ಲವನ್ನು ಕಳೆದುಕೊಂಡು ಮೇಲೆ ಒಂದಾಗುವುದು ಅಷ್ಟೇನು ಪ್ರಯೋಜನಕಾರಿಯಾದುದ್ದಲ್ಲ. ಸೀತೆಯ ಹೆಸರಿನಲ್ಲಿದ್ದ ಕೊಳದ ನೀರನ್ನು ಮುಟ್ಟದೇ ಬಾಯಾರಿಕೆಯ ದಾಹ ಹೆಚ್ಚಾಗಿ ನಾಯಕಿಯು ಕೊಳದ ನೀರನ್ನು ಕುಡಿಯುತ್ತಾಳೆ. ಆಗ ಪುರೋಹಿತ ಮತ್ತು ಗೌಡನ್ನು ಸ್ತ್ರೀಯನ್ನು ಶೋಷಣೆಯ ಕಂಬವಾಗಿ ಕಾಣುವ ಒಂದು ಕಂಬಕ್ಕೆ ಕಟ್ಟುತ್ತಾರೆ. ಆಗ ಕೆಳವರ್ಗದ ಜನಸಮುದಾಯವು ಮೇಲ್ವರ್ಗವು ಜನರ ಮೆಲೆ ತಿರುಗಿ ಬೀಳುತ್ತಾರೆ. ಬಹುಸಂಖ್ಯಾತರಾದ ಕೆಳವರ್ಗದವರನ್ನು ದೈವದ ಮತ್ತು ಧರ್ಮದ ಹೆಸರಲ್ಲಿನ ಮೇಲ್ವರ್ಗವು ಶೋಷಣೆ ದಬ್ಬಾಳಿಕೆ, ಸಾಮಾಜಿಕ ಮೂಢನಂಬಿಕೆಯ ಆಚರಣೆಗಳನ್ನು ಮಾಡಿಸುತ್ತಾ ಬಂದಿದೆ. ಬರಗೂರುರವರ ಈ ಕೋಟೆ ಸಿನಿಮಾದಲ್ಲಿ ತಳಸಮುದಾಯವು ಒಂದಾಗಿ ಮೇಲ್ವರ್ಗವನ್ನು ದಿಕ್ಕರಿಸುವ ಹಾಗೂ ತಿರುಗಿ ಬಿದ್ದಿದ್ದನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ ಹೊರತು ಸಂಪೂರ್ಣವಾಗಿ ಜಾತಿಪದ್ದತಿ, ಅಸ್ಪೃಶ್ಯತೆ, ಗುಲಾಮಗಿರಿ ಇವುಗಳಿಂದ ಮುಕ್ತವಾಗಿರುವುದನ್ನು ಚಿತ್ರಿಸಿಲ್ಲ. ಕೋಟೆಯು ಜನರ ಹಿತರಕ್ಷಣೆಯನ್ನು ಸಾಮಾಜಿಕ ಸಮಾನತೆಯನ್ನು ಕಾಪಾಡುವ ಕೋಟೆಯಾಗಿರಲಿ ಬರೀ ಅಸ್ಪೃಶ್ಯತೆ ಮತ್ತು ಗುಲಾಮಗಿರಿ, ಜಾತಿಪದ್ದತಿ, ದಾಟದೇ ಇರುವ ದಿಗ್ಭಂಧನದ ಕೋಟೆ ಆಗಬಾರದು ಎಂಬುದು ನನ್ನ ಅಧ್ಯಯನದ ಆಶಯವಾಗಿದೆ. ಬರಗೂರುರವರ ಮತ್ತೊಂದು ಸಿನಿಮಾದ "ಸೂರ್ಯ"ಚಿತ್ರದಲ್ಲಿ ನಾವು ನೋಡಬಹುದಾದ ಅಸ್ಪೃಶ್ಯತೆಯನ್ನು ಕೆಳವರ್ಗದ ಕೆಳಜಾತಿಯಲ್ಲಿನ "ಕರಿಯ" ಎಂಬುವನಿಂದ ಜಮೀನ್ದಾರಿ ಹಾಗೂ ಸಾಹುಕಾರ್ (ರಾಮಣ್ಣ) ಮೂಲಕ ಅಸ್ಪುಶ್ಯತೆಯನ್ನು ನೋಡುತ್ತೇವೆ. "ಸೂರ್ಯ" ಎಂಬ ಸಿನಿಮಾದ ಶೀರ್ಷಿಕೆಯು ಬೆಳಕು ಚೆಲ್ಲಲಿ ದಲಿತರ ಬಾಳಲ್ಲಿ ಎಂಬ ಉದ್ದೇಶವೂ ಆಗಿರಬಹುದು. ಸೂರ್ಯ ಸಿನಿಮಾದಲ್ಲಿನ ಕೆಳವರ್ಗದ ಒಬ್ಬ ಯುವಕನೂ ಮೇಲ್ವರ್ಗದ ಹೆಣ್ಣಿನ ಬಾಳಿನಲ್ಲಿ ಸೌಭಾಗ್ಯದ ಬೆಳಕನ್ನು ನೀಡುತ್ತಾನೆ. ಅಧಿಕಾರದ ನೆಲೆಯಲ್ಲಿ ಸ್ತ್ರೀಯನ್ನು ಕಡೆಗಾಣಿಸುವುದು ಮತ್ತು ಬೋಗದ ವಸ್ತುವಾಗಿ ಪುರುಷ ಸಮಾಜವು ನೊಡುತ್ತೇವೆ. ಕರಿಯ ಎಂಬ ಕೆಳವರ್ಗದ ಅಸ್ಪೃಶ್ಯತೆಯ ಯುವಕನನ್ನು ಜಮೀನ್ದಾರನ ಮನೆಯಲ್ಲಿ ಜೀತದ ಕೆಲಸವನ್ನು ಮಾಡುತ್ತಾನೆ. ಆದರೇ ಜಮೀನ್ದಾರನ ಹೆಂಡತಿ ಆ ಜೀತದಾಳುವಿನಿಂದಲೇ ಗರ್ಭದರಿಸುತಾಳೆ. ಕೆಳವರ್ಗದ ಹೆಂಗಸರನ್ನು ನೋಡಿ ಜೊಲ್ಲುಸುರಿಸುವ ರೀತಿಯಲ್ಲಿ ಕೆಳವರ್ಗದ ಪುರುಷರನ್ನು ಕೂಡ ಮೇಲ್ವರ್ಗದ ಮಹಿಳೆಯರು ಪಡೆಯಲು ಇಷ್ಟಪಡುತ್ತಾರೆ ಎಂಬುದನ್ನು ತಮ್ಮ ಚಿತ್ರಗಳಲ್ಲಿ ಬಿಂಬಿಸಿದ್ದಾರೆ. ಪುರುಷ ಸಮಾಜಕ್ಕೆ ಹೆದರುತ್ತಿದ್ದ ಸ್ತ್ರೀಯೂ ಧೈರ್ಯವಾಗಿ ಅವಳ ಆಸೆ, ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಮುಂದಾಗುತ್ತಾಳೆ. ಬರಗೂರುರವರ ಸಿನಿಮಾಗಳು ಮೆಲ್ವರ್ಗವೂ ನಡೆಸುತ್ತಿದ್ದ ಅಸ್ಪುಶ್ಯತೆ, ಜಾತಿಪದ್ದತಿ, ಸಾಮಾಜಿಕ ಆಚರಣೆಗಳು ಪ್ರಶ್ನಿಸುವುದು ಹಾಗೂ ಅವುಗಳಿಂದ ಮುಕ್ತವಾಗುವುದು ಅವರ ಮುಖ್ಯ ಉದ್ದೇಶವಾಗಿದೆ. ಮತ್ತೊಂದು ಸಿನಿಮಾವಾದ ಕರಡಿಪುರ ಸಿನಿಮಾದಲ್ಲಿ ಮಂತ್ರ–ತಂತ್ರಗಳ ಮೂಲಕ ತಳಸಮುದಾಯದ ಜನತೆಯ ಮೇಲೆ ಅನೇಕ ರೀತಿಯ ಶೋಷಣೆ, ದಬ್ಬಾಳಿಕೆ, ದೌರ್ಜನ್ಯವನ್ನು ಮೇಲ್ವರ್ಗವು ನಡೆಸುವುದನ್ನು ನೊಡಬಹುದು. ಬುಡಕಟ್ಟು ಜನಾಂಗವೂ ಊರಿಂದ ಆಚೆ ವಾಸಿಸುತ್ತಿದ್ದು, ಊರ ಒಳಗೆ ಪ್ರವೇಶವನ್ನು ಮಾಡುವಂತಿರಲಿಲ್ಲ. ಸತ್ಯವನ್ನು ತಿಳಿದ ಗೌರಿ ಎಂಬುವಳನ್ನು ಬುದ್ದಿಮಾಂದ್ಯಳೆಂದು ಕರೆಯಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಸಹ ಕೆಳವರ್ಗದ ಜನತೆಯನ್ನು ಮೇಲ್ವರ್ಗದ ಅಗ್ರಹಾರಗಳಿಗೆ ಪ್ರವೇಶ ಇಲ್ಲ. ಇವೆಲ್ಲವನ್ನು ಮನಗಂಡ ಬರಗೂರುರವರು ತಳಸಮುದಾಯದವರ ಸಂಕಷ್ಟಗಳನ್ನು ಶೋಷಣೆ, ಅಸ್ಪುಶ್ಯತೆ, ಜಾತಿಪದ್ದತಿ, ಗುಲಾಮಗಿರಿ ಪದ್ದತಿಯನ್ನು ಮಾಡಬಾರದು ಎಂಬುದಾಗಿ ಹೇಳಿದ್ದಾರೆ. ಜಗತ್ತನ್ನು ಈಗಲೂ ಆಳುತ್ತಿರುವ 5 ಅಧಿಕಾರ ವರ್ಗಗಳು ದೈವಾಧಿಕಾರ, ಧರ್ಮಾಧಿಕಾರ, ಪುರುಷಾಧಿಕಾರ, ಜ್ಞಾನಾಧಿಕಾರ, ರಾಜ್ಯಾಧಿಕಾರ ಇವುಗಳ ಹೆಸರಿನಲ್ಲಿ ತಳಸಮುದಾಯವನ್ನು ಅಸ್ಪುಶ್ಯತೆಯಿಂದ ನೋಡುತ್ತಿದೆ. ತಳ ಸಮುದಾಯವು ಇವುಗಳನ್ನು ಪ್ರಶ್ನಸುವುದು ಹಾಗೂ ಇವುಗಳಿಂದ ಪರಿವರ್ತನೆಯಾಗುವುದು ಬರಗೂರುರವರ ಸಿನಿಮಾಗಳ ಮೂಲ ಆಶಯವಾಗಿದೆ.

**ಬರಗೂರು ಸಿನಿಮಾಗಳಲ್ಲಿ ಜೀತ ಪದ್ಧತಿ ಮತ್ತು ಗುಲಾಮಗಿರಿ ಪದ್ಧತಿಯ ಚಿತ್ರಣ**

ಮೇಲ್ವರ್ಗದ ಜಾತಿಗಳು ಕೆಳವರ್ಗದ ಜಾತಿಯ ಮೇಲೆ ಒತ್ತಾಯ ಪೂರ್ವಕವಾದ ಅನಿಷ್ಠವಾದ ಆಚರಣೆಗಳನ್ನು ಮಾಡಿಸುತ್ತಿದ್ದರು. ನಾವು ನೋಡಬಹುದಾದ ಬಾಲ್ಯವಿವಾಹ, ನರಬಲಿ, ಮೂರ್ತಿ ಪೂಜೆ, ಸತಿಸಹಗಮನ ಪದ್ದತಿ, ದೇವದಾಸಿ ಪದ್ದತಿ, ಜೀತ ಪದ್ದತಿ ಇನ್ನೂ ಅನೇಕ ಮೌಢ್ಯತೆಯ ಪದ್ದತಿಗಳನ್ನು ಆಚರಣೆಯಲ್ಲಿದ್ದವು. ಬರಗೂರವರ ಸಿನಿಮಾಗಳಲ್ಲಿನ ಜೀತ ಪದ್ದತಿ ಮತ್ತು ಗುಲಾಮಗಿರಿ ಪದ್ದತಿಯು ಹೇಗೆ ತಳಸಮುದಾಯದ ಮೇಲೆ ಪ್ರಭಾವವನ್ನು ಬೀರಿವೆ ಎಂಬುದಾಗಿ ಕೆಲವು ಸಿನಿಮಾಗಳ ಮೂಲಕ ಚಿತ್ರಿಸಿದ್ದಾರೆ. "ಸೂರ್ಯ" ಎಂಬ ಸಿನಿಮಾದಲ್ಲಿ ಕೆಳಜಾತಿಯವನಾಗಿದ್ದ "ಕರಿಯ" ಎಂಬುವವನನ್ನ ಊರಿನ ಜಮೀನ್ದಾರನ ಮನೆಯಲ್ಲಿ ಜೀತದಾಳಾಗಿ ಕಾಣಬಹುದು. ಜೀತಪದ್ದತಿ ಮತ್ತು ಗುಲಾಮಗಿರಿ ಪದ್ದತಿಯು ಅನೇಕ ಕಾರಣಗಳಿಂದ ನಡೆಯುತ್ತದೆ. ತಂದೆಯು ಮಾಡಿದ ಸಾಲವನ್ನು ಮಗನ ಮೂಲಕ ತೀರಿಸಿಕೊಳ್ಳುವುದು ಹಾಗೆಯೇ ಆಸ್ತಿಯ ವಿಚಾರದಲ್ಲಿ ಜೀತವನ್ನು ಮಾಡುವುದು ನಂತರ ಹೊಲ, ಮನೆ ಇಲ್ಲದ ಕಡುಬಡತನ ಹಸಿವು ಇದ್ದಾಗ ಅನ್ನಕ್ಕಾಗಿ ಜೀವನವನ್ನು ನಡೆಸಲು ಜೀತ ಇರುವುದು ಕಾಣುತ್ತೇವೆ. ಜೀತಕ್ಕೆ ಒಳಗಾದವನಿಂದ ಕೆಟ್ಟಕಾರ್ಯಗಳನ್ನು ಮಾಡಿಸುತ್ತಾನೆ. ಒಡೆಯನು ಇದೇ ಸಿನಿಮಾದಲ್ಲಿ ಸಾಹುಕಾರನಾದ ರಾಮಣ್ಣನ ಮನೆಯಲ್ಲಿಯ ಅನೇಕ ಕೆಳಜನತೆಯ ಕೂಲಿಕಾರ್ಮಿಕರ ರೀತಿಯಲ್ಲಿ ಆಹಾರಕ್ಕಾಗಿ ಜೀತ–ಗುಲಾಮನಾಗಿ ಬದುಕುವುದು ಬರಗೂರುರವರ ಮತ್ತೋಂದು ಸಿನಿಮಾವಾದ ಕೋಟೆ ಸಿನಿಮಾದಲ್ಲಿ ಅಸ್ಪೃಷ್ಯ ಹೆಣ್ಣಿನ ಮೇಲೆ ಶೀಲತ್ವವನ್ನು ಬಲವಂತವಾಗಿ ಹಾಳುಮಾಡುವ ಜಮೀನ್ದಾರಿಯ ಮನೆಯಲ್ಲಿ ಕೆಳವರ್ಗದ ಜನತೆಯ ಅನ್ನಕ್ಕಾಗಿ ಜೀತವನ್ನು ಮಾಡುವುದನ್ನು ಕಾಣುತ್ತೇವೆ. ಯಾವುದೇ ತರಹವಾದ ಕೀಳು ಎನ್ನದೇ ಸ್ತ್ರೀಯನ್ನು ಮುಟ್ಟುವುದು ಪುರೋಹಿತನ ಮನದ ಭಾವನೆಯಾಗಿರುತ್ತದೆ. ಕರಡಿಪುರ ಎಂಬ ಸಿನಿಮಾದಲ್ಲಿ ರಾಜ ಕೂಡ ಗುಲಾಮ ಅಥವಾ ಜೀತದ ರೀತಿಯಲ್ಲಿ ಸಿದ್ದಪ್ಪನ ಹತ್ತಿರ

ಕೆಲಸ ಮಾಡುತ್ತಿರುವುದು ಒಂದು ರೀತಿಯ ಜೀತತನವೇ ಆಗಿ ನೋಡಬಹುದು. ಬರಗೂರುರವರ ಮತ್ತೊಂದು ಸಿನಿಮಾದಲ್ಲಿ ಬುಡಕಟ್ಟು ಜನಾಂಗವು ಊರಿನ ಸಾಹುಕಾರನ ಹತ್ತಿರ ಅನ್ನಕ್ಕಾಗಿ ಕೆಳಮಟ್ಟದಲ್ಲಿ ಮನೆಯ ಹೊರಗೆ ನಿಂತು ಆಹಾರ ಧಾನ ಕೇಳುವುದು ಒಂದು ರೀತಿಯ ಗುಲಾಮ ತನವೇ ಆಗಿ ನೋಡಬಹುದು. ಇವುಗಳನ್ನ ನಿರ್ಮೂಲನೆಯೇ ಬರಗೂರುರವರ ಸಿನಿಮಾಗಳ ಮುಖ್ಯ ಉದ್ದೇಶವಾಗಿತ್ತು. ಹಂತ–ಹಂತವಾಗಿ ಇಂಥಹ ಪದ್ದತಿಗಳನ್ನ ಕಡಿಮೆಯಾಗುವ ರೀತಿಯಲ್ಲಿ ಜನಸಾಮಾನ್ಯರಿಗೆ ಬರಗೂರವರ ಸಿನಿಮಾಗಳು ಅರಿವನ್ನ ಬೆಳೆಸಿವೆ.

**ಬರಗೂರರ ಸಿನಿಮಾದಲ್ಲಿ ಅನಿಷ್ಟ ಸಾಮಾಜಿಕ ಆಚರಣೆಗಳ ಬಗ್ಗೆ ಜಾಗೃತಿ**

ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ರೀತಿಯ ಮೌಢ್ಯತೆಯಿಂದ ಕೂಡಿದ ಸಾಂಸ್ಕೃತಿಕ, ಧಾರ್ಮಿಕ ಆಚರಣೆಯಾಗಿ ನಡೆಸುತ್ತಾರೆ. ಹಾಗೆಯೇ ಕೆಲವೊಂದು ಆಚರಣೆಗಳು ಮಾನಸಿಕವಾಗಿ, ದೈಹಿಕವಾಗಿ, ಶೋಷಣೆಯನ್ನು ದೌರ್ಜನ್ಯದ ದಬ್ಬಾಳಿಕೆಯ ನೆಲೆಯಲ್ಲಿ ಸಾಮಾಜಿಕ ಆಚರಣೆಗಳನ್ನು ಧರ್ಮದ ದೈವದ ಹೆಸರಿನಲ್ಲಿ ಪುರೋಹಿತಶಾಹಿ ವರ್ಗ ಬಂಡವಾಳ ವರ್ಗವು ಕೆಳಸಮುದಾಯದ ಮೇಲೆ ಸಾಮಾಜಿಕ ಆಚರಣೆಯನ್ನು ಹೇರಿದ್ದಾರೆ. ಬರಗೂರರ ಸಿನಿಮಾಗಳಾದ ಹಗಲುವೇಷ, ಕರಡಿಪುರ, ಶಬರಿ, ಕೋಟೆ ಚಿತ್ರಗಳಲ್ಲಿ ಸಾಂಸ್ಕೃತಿಕವಾಗಿ ಅಸ್ಪೃಶ್ಯತೆಯ ಆಚರಣೆಯಾಗಿ ಕೆಲವು ಆಚರಣೆಗಳನ್ನು ನಡೆಸುವುದನ್ನು ಕಾಣುತ್ತೇವೆ. ಕರಡಿಪುರ ಚಿತ್ರದಲ್ಲಿ ಬುಡಕಟ್ಟಿನಲ್ಲಿನ ಹೆಣ್ಣು ಮೈನೇರೆದಾಗ ಆ ಹೆಣ್ಣನ್ನು ಊರಾಚೆ ಇರುವ ಒಂದು ಗುಡಿಸಿನಲ್ಲಿ ಬಿಡುತ್ತಾರೆ. ಈ ಹೆಣ್ಣಿನ ಕಾವಲಿಗೆ ಯಾವುದೇ ಗಂಡು ವ್ಯಕ್ತಿಯು ಇರುವುದಿಲ್ಲ. ಋತುಮತಿಯಾದ ಹೆಣ್ಣನ್ನು ಮುಖವಾಡ ಧರಿಸಿದ ಜಡೇಸ್ವಾಮಿಯು ಅಪಹರಿಸಿ ನರಬಲಿ ಕೊಡುವುದನ್ನ ನೋಡಬಹುದು. ಆದರೆ ಋತುಮತಿಯಾದ ಹೆಣ್ಣು ಕಾಣೆಯಾಗುವುದು ಅದೇ ಬುಡಕಟ್ಟಿನ ಹೆಣ್ಣಾದ ಗೌರಿಗೆ ವಾಸ್ತಾವ ಸತ್ಯಗೊತ್ತಿರುವುದು. ಪುರೋಹಿತಶಾಹಿ ಅಧಿಕಾರ ವರ್ಗವು ಸತ್ಯಕ್ಕೆ ಹುಚ್ಚಿ ಎನ್ನುವ ಪಟ್ಟಿ ಕಟ್ಟಿ ಮರೆಮಾಚುವ ಪ್ರಕ್ರಿಯೆಯನ್ನು ಚಿತ್ರದಲ್ಲಿ ಚಿತ್ರಿಸಿದ್ದಾರೆ. ರಾಜು ಎಂಬ ನಾಯಕನಿಂದ ಸತ್ಯವನ್ನು ಹೊರ ಹಾಕಿಸುವ ಪ್ರಯತ್ನವನ್ನು ಬರಗೂರುರವರು ಕರಡಿಪುರ ಎಂಬ ಸಿನಿಮಾದ ಮೂಲಕ ಮಾಡಿದ್ದಾರೆ, ಸತ್ಯಕ್ಕೆ ಹುಚ್ಚಿಪಟ್ಟಿಯನ್ನು ಕಟ್ಟಿ ಕಾಣೆಯಾಗುತ್ತಿರುವ ಹೆಣ್ಣು ಮಕ್ಕಳಿಗೆ ಗೌರಿಯೇ ಕಾರಣ ಎಂದು ದೂಷಿಸುತ್ತಾರೆ. ವಾಸ್ತಾವ ಸತ್ಯವನ್ನು ಕಂಡ ಗೌರಿಯು ಯಾರ ಬಳಿಯೂ ಹೇಳಿಕೊಳ್ಳಲು ಆಗದ ಸ್ಥಿಯಲ್ಲಿರುತ್ತಾಳೆ. ಕೊನೆಗೆ ರಾಜು ಬುಡಕಟ್ಟು ಜನರೊಂದಿಗೆ ಕೈ ಜೋಡಿಸಿದ ಬುಡಕಟ್ಟು ಜನಾಂಗದಲ್ಲಿನ ಋತುಮತಿಯಾದ ಹೆಣ್ಣು ಕಾಣೆಯಾಗುತ್ತಿರುವುದು ಗೌರಿಯ ಹುಚ್ಚುತನ ಭೂತ, ಪ್ರೇತದಿಂದಲ್ಲ. ಜಡೇಸ್ವಾಮಿ ಮತ್ತು ರಾಜಕೀಯ ನಾಯಕರೇ ಕಾರಣ ಎಂಬುದನ್ನ ಸಾಮಾನ್ಯ ಜನರಿಗೆ ಅರಿವು ಮೂಡಿಸಿ ಒಗ್ಗಟ್ಟಾಗುವುದನ್ನು ರಾಜು ಮಾಡುತ್ತಾನೆ. ಇದಲ್ಲದೇ ಇನ್ನೊಂದು ಸಿನಿಮಾದ “ಶಬರಿ” ಎಂಬ ಚಿತ್ರದಲ್ಲಿ ಧಾರ್ಮಿಕತೆ ಹಿನ್ನೆಲೆಯಲ್ಲಿ ಸಂಪ್ರದಾಯ ಆಚರಣೆಯೊಂದನ್ನು ಆಚರಿಸುವುದನ್ನು ಚಿತ್ರದಲ್ಲಿ ಬರಗೂರುರವರು ಚಿತ್ರಿಸಿದ್ದಾರೆ. ಶಬರಿ ಸಿನಿಮಾದಲ್ಲಿ ಧಾರ್ಮಿಕತೆಯಿಂದ ತಲೆಮಾರುಗಳಿಂದ ನಡೆಸಿಕೊಂಡು ಬಂದ ಸಾಮಾಜಿಕ ಆಚರಣೆಯನ್ನು ಬರಗೂರುರವರು ಚಿತ್ರಿಸಿದ್ದಾರೆ. ಶಬರಿ ಸಿನಿಮಾವು ಒಂದು ಬುಡಕಟ್ಟು ಜನಾಂಗದಲ್ಲಿನ ನಂಬಿಕೆ, ದೇವರಾದ ಶಬರಿ ಎಂಬ ಪ್ರತಿಮೆಯ ಮೂಲಕ ಮದುವೆಯಾದ ಬುಡಕಟ್ಟಿನ ಮಹಿಳೆಯು ದೇವರ ಸನ್ನಿಧಿಯಲ್ಲಿ ಒಂದು ರಾತ್ರಿ ಕಳೆಯಬೇಕು ಎಂಬ ಕೂಡಿಕೆ ಪದ್ದತಿಯಾಗಿ ಆಚರಿಸುತ್ತಿದ್ದರೂ ಬುಡಕಟ್ಟಿನ ಮಹಿಳೆಯ ದೇವಸ್ಥಾನಕ್ಕೆ ಹೋದಾಗ ನರಸಿಂಹನ ಅವತಾರಿಯಾಗಿ ಆ ಊರಿನ ಗೌಡನ್ನು ಬುಡಕಟ್ಟು ಮಹಿಳೆಯೊಂದಿಗೆ ಕೂಡಿಕೆಯಾಗುವುದನ್ನು ಚಿತ್ರಿಸಿದ್ದಾರೆ. ಈ ಶಬರಿ ಸಿನಿಮಾದಲ್ಲಿ ಓದು ಬರಹ ಕಲಿತ ಚಂದ್ರು ಎಂಬಾತನನ್ನು ಶಬರಿ ಎಂಬ ಬುಡಕಟ್ಟಿನ ಹೆಣ್ಣನ್ನು ಮದುವೆಯಾದಾಗ ಚಂದ್ರನ್ನು ಶಬರಿಯನ್ನು ದೇವಸ್ಥಾನಕ್ಕೆ ಕಳಿಸುವುದನ್ನು ನಿರಾಕರಿಸುತ್ತಾನೆ, ಆದರೆ ಆ ಬುಡಕಟ್ಟಿನ ಜನರು ಒಪ್ಪದೇ ಇದ್ದಾಗ ಒಲ್ಲದ ಮನಸ್ಸಿನಿಂದ ದೇವಸ್ಥಾನಕ್ಕೆ ಶಬರಿಯನ್ನು ಕಳಿಸುವ ಜೊತೆಗೆ ಕಾವಲಿಗೆ ಚಂದ್ರನೇ ಹೋಗುವುದನ್ನು ಕಾಣುತ್ತೇವೆ. ಶಬರಿಯಾದ ದೇವಸ್ಥಾನದ ಒಳಗೆ ಹೋದಾಗ ಊರಿನ ಗೌಡನೊಂದಿಗೆ ಜಗಳ ಮಾಡುತ್ತಾನೆ. ಊರಿನ ಜನರಿಗೆ ಸತ್ಯ ಗೊತ್ತಾಗುತ್ತದೆ ಎಂಬುದಕ್ಕೆ ಗೌಡನು ಚಂದ್ರನನ್ನು ಸಾಯುಸುತ್ತಾನೆ. ಗೌಡ ಮತ್ತು ಚಂದ್ರನ ನಡುವೆ ನಡೆದ ಜಗಳದಲ್ಲಿ ಚಂದ್ರನನ್ನು ಕೊಲ್ಲುತ್ತಾರೆ ಅದನ್ನು ಮೂಗ ಹುಚ್ಚೀರ ನೋಡುತ್ತಾನೆ. ಅಷ್ಟೆ ಅಲ್ಲದೆ ಗೌಡನ ಎಲ್ಲಾ ಕೆಲಸಗಳ ವಾಸ್ತಾವ ಸತ್ಯವು ಆತನಿಗೆ ಗೊತ್ತಿರುತ್ತದೆ. ಬುಡಕಟ್ಟಿನ ಜನತೆಗೆ ಚಂದ್ರನ ಸಾವು ಧಾರ್ಮಿಕವಾದ ಸಂಪ್ರದಾಯವನ್ನು ದಿಕ್ಕರಿಸಿದಕ್ಕೆ ಆದ ಸಾವು ಎಂದು ತಿಳಿಯುತ್ತಾರೆ. ಚಂದ್ರನ ಸಾವು ಗೊತ್ತಿರುವ ಹುಚ್ಚೀರನಿಗೆ ಮಾತು ಬಾರದ ಹಾಗೇ ಅಧಿಕಾರ ವರ್ಗವು ಮಾಡಿದೆ. ನಂತರ ಚಂದ್ರನ ಸಾವನ್ನ ಕಂಡುಹಿಡಿಯುವುದಕ್ಕೆ “ಸೂರ್ಯ” ಬುತ್ತಾನೆ. ಸುರ್ಯನು ಬರೀ ಭೂಮಿಗೆ ಬೆಳಕು ಕೊಡದೇ ಇಡೀ ಬುಡಕಟ್ಟಿನ ಜನತೆಗೆ ಅಕ್ಷರದ ಬೆಳಕನ್ನ ಚೆಲ್ಲುತಾನೆ. ಆಗ ಹುಚ್ಚೀರನು ಕೂಡ ಅಕ್ಷರ ಕಲಿತು ಚಂದ್ರನ ಸಾವಿನ ಬಗ್ಗೆ ಬರವಣಿಗೆಯ ಮೂಲಕ ತಿಳಿಸುತ್ತಾನೆ. ನಂತರ ಬುಡಕಟ್ಟಿನ ಕೂಡಿಕೆ ಪದ್ದತಿಯನ್ನು ದಿಕ್ಕರಿಸುತ್ತಾನೆ. ಸ್ವತಂತ್ರವಾಗಿ ಅಲೋಚನೆಯನ್ನು ಮಾಡಿ ಬದುಕನ್ನು ಕಟ್ಟಿಕೊಳ್ಳಲು “ಅಕ್ಷರ” ಜ್ಞಾನವನ್ನು ಬಳಸಿದ್ದಾರೆ. ಈ ರೀತಿಯಲ್ಲಿ ಅಕ್ಷರದ ಮಹತ್ವವನ್ನು ಬರಗೂರುರವರು ಶಬರಿಯ ಸಿನಿಮಾದ ಮೂಲಕ ಜನತೆಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಸಾಮಾಜಿಕ ಆಚರಣೆಗಳು ಹೆಚ್ಚು ಜೀವಂತವಾಗಿರುವುದು ಬುಡಕಟ್ಟು ಜನಾಂಗದವರಲ್ಲಿ ಹಾಗೂ ಹಿಂದುಳಿದ ಜನಸಮುದಾಯಗಳಲ್ಲಿ ಅನಿಷ್ಟ ಪದ್ಧತಿಯ ಆಚರಣೆಗಳನ್ನು ಈಗಲೂ ಮುಂದುವರಿಸುತ್ತಾ ಬಂದಿದ್ದಾರೆ. ಕೆಲವೊಂದು ಊರುಗಳಲ್ಲಿ ಕೆಳವರ್ಗದವರು ಮನೆಯಿಂದ ಹೊರಗೆ ನಿಲ್ಲುವ ಹಾಗೂ ಅಗ್ರಹಾರಗಳಿಗೆ ಪ್ರವೇಶ ಇಲ್ಲದ, ಕುಡಿಯಲು ಬಳಸುವ ಬಾವಿ, ಕೆರೆಗಳಿಂದ ದೂರ ಇರುವುದನ್ನು ಬರಗೂರುರವರು ವಾಸ್ತಾವಿಕವಾದ ಗ್ರಾಮೀಣ ಜನರರಲ್ಲಿನ ಸಾಮಾಜಿಕ ಆಚರಣೆಗಳನ್ನು ಸಿನಿಮಾ, ಮೂಲಕ ಕಟ್ಟಿಕೊಟ್ಟಿದ್ದಾರೆ. ಅಸ್ಪೃಶ್ಯತೆಯಿಂದ ಜಾತಿ ಪದ್ಧತಿಯು ಒಂದು ಸಾಮಾಜಿಕ ಅನಿಷ್ಠವಾದ ಆಚರಣೆಯೇ ಆಗಿದೆ. ಕೋಟೆ ಸಿನಿಮಾದಲ್ಲಿ ಸೀತಾಮಾತೆಯ ಕೊಳದ ನೀರನ್ನು ಕೆಳಜಾತಿಯ ತುಳಿತಕ್ಕೆ ಒಳಗಾದವರು ಮುಟ್ಟುವಂತಿರಲಿಲ್ಲ ಎಂಬ ಅಸ್ಪೃಶ್ಯತಾ ಆಚರಣೆಯನ್ನು ಅಧಿಕಾರ ವರ್ಗವು, ಪುರೋಹಿತಶಾಹಿ ವರ್ಗವೂ ಕೂಡಿಸಿತ್ತು. ಸೀತಾ ಮಾತೆಯ ಕೊಳದ ನೀರನ್ನು ಮುಟ್ಟಿದರೇ ನಾವು ರಕ್ತಕಾರಿ ಮರಣ ಹೊಂದುವೆವು ಎಂಬ ನಂಬಿಕೆಯಿಂದ ಬಂದಿದ್ದಾರೆ. ಈ ರೀತಿಯ ಅನೇಕ ಆಚರಣೆಗಳನ್ನು ಇನ್ನೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಆಚರಿಸುವುದನ್ನು ನೋಡಬಹುದು. ಹಗಲುವೇಷ ಸಿನಿಮಾದಲ್ಲಿ ಅಲೆಮಾರಿ ಜನಾಂಗವು ಊರ ಒಳಗೆ ವಾಸಿಸುವಂತಿಲ್ಲ ಎಂಬುದಾಗಿ ಅಧಿಕಾರವರ್ಗ, ಸಾಹುಕಾರ, ಜಮೀನ್ದಾರರು ಆದೇಶಿಸಿದ್ದರೂ ಕರಡಿಪುರ ಚಿತ್ರದಲ್ಲಿ ಊರಲ್ಲಿ ನಡೆಯುವ ಹಬ್ಬ ಜಾತ್ರೆಗಳಿಗೆ ಬುಡಕಟ್ಟಿನವರು ಪ್ರದೇಶವನ್ನು ಮಾಡಬಾರದು ಎಂಬ ಧಾರ್ಮಿಕವಾದ ಪದ್ದತಿಯನ್ನು ವಿಧಿಸಿದ್ದಿದ್ದನ್ನ ಕಾಣಬಹುದು. ಜನಸಾಮಾನ್ಯ ವರ್ಗವೂ

ಬಂಡವಾಳಶಾಹಿ, ಪುರೋಹಿತಶಾಹಿ, ಸಾಹುಕಾರ, ಜಮೀನ್ದಾರರು ಇವರು ಮಾಡಿದ ಅನಿಷ್ಠವಾದ ಮೌಢ್ಯತೆಯಿಂದ ಕೂಡಿದ ಆಚರಣೆಗಳನ್ನು ಪ್ರಶ್ನಿಸುವುದು ಹಾಗೂ ಇವುಗಳಿಂದ ಮುಕ್ತನಾಗುವಂತೆ ಜನತೆಗೆ ಅಕ್ಷರದ ಜ್ಞಾನವನ್ನು ಬಳಸಿಕೊಂಡು ಜನಸಮುದಾಯಕ್ಕೆ ಅರಿವು ಮೂಡಿಸಿ ಜನರ ಜೀವನವನ್ನು ಸಂತೋಷಗೊಳಿಸುವಾಗಿ ಜನತೆಯ ಸಂಕಷ್ಠಗಳಿಗೆ ದನಿಯಾಗಿ ಬರಗೂರುರವು ಸಾಮಾನ್ಯ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನವನ್ನು ಅವರ ಸಿನಿಮಾಗಳ ಮೂಲಕ ಬಿತ್ತರಿಸಿದ್ದಾರೆ. ಬರಗೂರುರವರು ವಾಸ್ತಾವಿಕ ಸತ್ಯವನ್ನು ಜನತೆಗೆ ತೋರಿಸುವ ಹಾಗೂ ಅವುಗಳಿಂದಾಗುವ ಮೋಸ, ಶೋಷಣೆ, ದೌರ್ಜನ್ಯ, ದಬ್ಬಾಳಿಕೆಯನ್ನು ಕುರಿತಾಗಿ ಚಿತ್ರಿಸಿ ಇವೆಲ್ಲವುಗಳಿಂದ ಮುಕ್ತರಾಗುವಂತೆ ತಮ್ಮ ಸಿನಿಮಾಗಳ ಮೂಲಕ ಚಿತ್ರಿಸಿದ್ದಾರೆ.

**ಬಂಡವಾಳಶಾಹಿ, ಜಮೀನ್ದಾರಿ ಹಾಗೂ ಪುರೋಹಿತಶಾಹಿ ದಬ್ಬಾಳಿಕೆಯ ಬಗ್ಗೆ ಅನಾವರಣ**

ಬರಗೂರುರರ ಸಿನಿಮಾಗಳಾದ ಹಗಲುವೇಷ, ಕರಡಿಪುರ, ಶಬರಿ, ಕೋಟೆ, ಸೂರ್ಯ ಗಳಂತಹ ಚಿತ್ರಗಳಲ್ಲಿ ಬಂಡವಾಳವರ್ಗ, ಜಮೀನ್ದಾರರು, ಪರುಹೋಹಿತವರ್ಗ ಹೇಗೆ ದುಡಿಸಿಕೊಂಡಿದ್ದಾರೆ ಎಂಬುದನ್ನು ಬರಗೂರುರವರು ನಿರ್ದೇಸಿರುವ ಸಿನಿಮಾಗಳಲ್ಲಿ ಚಿತ್ರಿಸಿದ್ದಾರೆ. ಹಗಲುವೇಷ ಸಿನಿಮಾಗಳಲ್ಲಿ ಬಂಡವಾಳಶಾಹಿ (ಬ್ರಿಟಿಷರು) ಬುಡಕಟ್ಟಿನ ಜನಾಂಗದ ಮೇಲೆ ಕಂದಾಯ ವಸೂಲಿಯ ರೂಪದಲ್ಲಿ ಲಾಠಿಚಾರ್ಜು ನಡೆಸುವುದು. ಬಂಡವಾಳಶಾಹಿಯ ಕಂದಾಯದ ನೆಪದಲ್ಲಿ ಸ್ತ್ರೀಯ ಮೇಲೆ ಶೋಷಣೆ, ಅತ್ಯಾಚಾರ ಒಳಪಡಿಸುವುದನ್ನ ನೋಡಬಹುದು. ಇವುಗಳಿಂದ ಮನನೊಂದ ತಳಸಮುದಾಯವು ಬಂಡವಾಳಶಾಹಿ ವಿರುದ್ಧ ತಿರುಗಿ ಬೀಳುತ್ತಾರೆ. ಹಾಗೇ ಅವರಿಂದ ಮುಕ್ತವಾಗಿ ಸ್ವತಂತ್ರವಾದ ಜೀವನವನ್ನು ನಡೆಸುವುದಾಗಿ ಚಿತ್ರಿಸಿದ್ದಾರೆ. ಬರಗೂರುರರ ಮತ್ತೊಂದು ಸಿನಿಮಾದ ಕರಡಿಪುರ ಚಿತ್ರದಲ್ಲಿ ಪುರೋಹಿತಶಾಹಿ ಹಾಗೂ ರಾಜಕೀಯ ನಾಯಕರು ಬುಡಕಟ್ಟಿನ ಜನಾಂಗದ ಮೇಲೆ ದೈವದ, ಧರ್ಮದ ಹೆಸರಿನಲ್ಲಿ ಶೋಷಣೆಯನ್ನು ಸಾಮಾಜಿಕ ಆಚರಣೆಯನ್ನು ನಡೆಸುವುದನ್ನು ಕಾಣುತ್ತೇವೆ ಇವುಗಳಿಂದ ಹೊರಬರುವ ಪ್ರಯತ್ನವನ್ನು ಜನಸಾಮಾನ್ಯರಿಗೆ ಸಿನಿಮಾಗಳ ಮೂಲಕ ಬರಗೂರುರವರು ಚಿತ್ರಿಸಿದ್ದಾರೆ. ಕರಡಿಪುರ ಸಿನಿಮಾದಲ್ಲಿ ಬುಡಕಟ್ಟು ಜನಾಂಗದ ಋತುಮತಿಯಾದ ಹೆಣ್ಣನ್ನು ಜಡೇ ಸ್ವಾಮಿಯು ನರಬಲಿ ಕೊಡುವುದನ್ನ ನೋಡಬಹುದು. ಇವುಗಳನ್ನು ತಿಳಿಯದ ತಳಸಮುದಾಯ ವರ್ಗವು ಭೂತ, ಪ್ರೇತವೇ ಕಾರಣವೆಂದು ತಿಳಿದಿದ್ದರು. ಇವುಗಳಿಂದ ಮುಕ್ತರಾಗಿಸುವ ರಾಜು ಎಂಬ ಅಕ್ಷರ ಜ್ಞಾನವುಳ್ಳವನಿಂದ ಜನಸಮುದಾಯಕ್ಕೆ ಅರಿವು ಮೂಡುತ್ತದೆ. ಶಬರಿ ಎಂಬ ಸಿನಿಮಾದಲ್ಲಿ ಊರಿನ ಗೌಡನು ದೇವರ ಹೆಸರಿನಲ್ಲಿ ಬುಡಕಟ್ಟಿನ ಹೆಣ್ಣಿನೊಂದಿಗೆ ಅನೈತಿಕವಾದ ಸಂಬಂಧವನ್ನು ಬಳಸುತ್ತಿದ್ದನು ಬುಡಕಟ್ಟಿನ ಹೆಣ್ಣು ಮದುವೆಯಾದ ಮೊದಲ ರಾತ್ರಿ ದೇವಸ್ಥಾನದಲ್ಲಿ ಇರಬೇಕು. ಈ ದೇವನ ಜೊತೆ ಮೊದಲು ಮಲಗಬೇಕು ಎಂದು ಪುರೋಹಿತವರ್ಗವೂ ಜನತೆಗೆ ಧಾರ್ಮಿಕವಾಗಿ ನಂಬುವಂತೆ ಹಾಗೂ ಆಚರಿಸುವಂತೆ ಮಾಡಿದೆ. ಇದರಿಂದ ದೇವರ ರೂಪದಾರಿಯಾಗಿ ಊರಿನ ಗೌಡನು ಅವತಾರಿಸುತ್ತಾನೆ. ಇದನ್ನು ಪ್ರಶ್ನಿಸಿದ ಚಂದ್ರನನ್ನು ಕೊಲ್ಲಲಾಗುತ್ತದೆ. ವಾಸ್ತವ ಸತ್ಯ ತಿಳಿದ ಹುಚ್ಚೀರನನ್ನು ಪುರೋಹಿತವರ್ಗ ಹಾಗೂ ಬಂಡವಾಳವರ್ಗ ಮೂಕನಾಗಿಸುತ್ತದೆ. ನಂತರ ಸೂರ್ಯನ ಮೂಲಕ "ಅಕ್ಷರ" ಬೆಳೆದು ಶಬರಿಯಿಂದ ವೀರ ಮಹಿಳೆಯಾಗಿ ನಾಯಕಿಯಾಗಿ ಬುಡಕಟ್ಟಿನ ಜನಾಂಗವನ್ನು ಬಿಕ್ಕಟ್ಟಿನಿಂದ ಜೀವನ ನಡೆಸಲು ಸಹಕಾರಿಯಾಗುತ್ತಾಳೆ. ಕೋಟೆ ಸಿನಿಮಾದಲ್ಲಿ ಪುರೊಹಿತ ಅಸ್ಪೃಷ್ಯತೆ ಹೆಣ್ಣಿನ ಬೋಗದ ವಸ್ತುವಾಗಿ ನೊಡುವುದನ್ನು ಕಾಣುತ್ತೇವೆ. ಸಾವಿಗೆ ಹತ್ತಿರವಿರುವ ವ್ಯಕ್ತಿಯನ್ನು ಅಸ್ಪೃಷ್ಯತೆ ಎಂಬ ಕಾರಣಕ್ಕಾಗಿ ಮುಟ್ಟುವುದಿಲ್ಲ ಆದರೆ ಅದೇ ಅಸ್ಪೃಷ್ಯನ ಹೆಂಡತಿಯನ್ನು ಕುಪ್ಪಸ ಕೊಡುವ ನೆಪದಲ್ಲಿ ಕೈ ಮುಟ್ಟುವುದು. ನಂತರ ಜಮೀನ್ದಾರಿಯಿಂದ ಅಸ್ಪೃಷ್ಯತೆ ಎನ್ನದೇ ಹೆಣ್ಣಿನ ಶೀಲವನ್ನು ಹಾಳುಮಾಡುತ್ತಾನೆ. ಸೀತಾ ಮಾತೆಯ ಕೊಳದ ನೀರನ್ನು ಮುಟ್ಟದ ಹಾಗೆ ಧಾರ್ಮಿಕವಾದ ನಂಬಿಕೆಯಿಂದ ಭಯವನ್ನು ಹುಟ್ಟಿಸುತ್ತದೆ. ಅತಿಹೆಚ್ಚಾಗಿ ಕರಿಯ ಎಂಬಾತನನ್ನು ಮನೆಯ ಜೀತಕ್ಕೆ ಬಳಸಿಕೊಳ್ಳುವುದನ್ನು ನೋಡುತ್ತೇವೆ. ಹಾಗೂ ಕರಿಯನ ಹೆಂಡತಿಯ ಸಾವನ್ನು ಸಾಹುಕಾರ ರಾಮಣ್ಣನ್ನು ಮುಚ್ಚಾಕುತ್ತಾನೆ. ಈ ರೀತಿಯ ಅನಿಷ್ಟ ಧೋರಣೆಗಳ ಮೂಲಕ ಕೃತ್ಯಗಳ ಮೂಲಕ ಜನಸಮುದಾಯದ ಮೇಲೆ ಶೋಷಣೆ ದಬ್ಬಾಳಿಕೆಯನ್ನು ಮಾಡುತ್ತಾ ಇದ್ದವೆ ಎಂಬುದನ್ನು ಬರಗೂರುರವರು ತಮ್ಮ ಸಿನಿಮಾಗಳ ಮೂಲಕ ಚಿತ್ರಿಸಿದ್ದಾರೆ. ಕೆಳ ಸಮಾಜವು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಮೊದಲು ತಮ್ಮ ಮೇಲಾಗುತ್ತಿರುವ ದಬ್ಬಾಳಿಕೆಗಳ ಅರಿವು ಪಡೆದುಕೊಳ್ಳಬೇಕು, ಅದನ್ನು ಪಡೆದುಕೊಳ್ಳುವುದಕ್ಕೆ ಅಕ್ಷರ ಜ್ಞಾನ ಅತ್ಯಂತ ಅವಶ್ಯಕ ಎನ್ನುವುದನ್ನ ತಮ್ಮ ಚಿತ್ರಗಳಲ್ಲಿ ಒತ್ತಿ ಹೇಳುವ ಪ್ರಯತ್ನ ಮಾಡಿದ್ದಾರೆ.

**ಉಪಸಂಹಾರ**

ಪರಿಣಾಮಕಾರಿ ಸಮೂಹ ಸಂವಹ ಮಾಧ್ಯಮ ಎಂದರೆ ಅದು ಸಿನಿಮಾ, ಈ ಸಿನಿಮಾದ ಮೂಲಕ ಎಲ್ಲರನ್ನು ಪರಿಣಾಮಕಾರಿಯಾಗಿ ನಾವು ತಲುಪಬಹುದು. ಈ ಸಿನಿಮಾಗಳ ಪ್ರಭಾವ ಸಮಾಜದ ಮೇಲೆ ಹೆಚ್ಚು ಪರಿಣಾಮ ಉಂಟು ಮಾಡುತ್ತದೆ. ಹಾಗಾಗಿಯೇ ಸಾಹಿತಿಯಾಗಿದ್ದರೂ ಕೂಡ ಬರಗೂರು ರಾಮಚಂದ್ರಪ್ಪನವರು ತಮ್ಮ ಬಂಡಾಯದ ಧನಿಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲು ಸಿನಿಮಾ ಕ್ಷೇತ್ರವನ್ನು ಆಯ್ಕೆಮಾಡಿಕೊಂಡಿದ್ದಾರೆ. ತಮ್ಮ ಕಥೆ, ಕಾದಂಬರಿ, ನಾಟಕಗಳಲ್ಲಿ ಮೂಡಿಬಂದಿರುವಂತೆ ಸಿನಿಮಾದಲ್ಲಿಯೂ ಕೂಡ ತಮ್ಮದೇ ಆದ ದೃಷ್ಟಿಕೋನವನ್ನು ಹೊಂದಿರುವ ಇವರು, ಸಿನಿಮಾದ ಮೂಲಕ ಸಮಾಜದಲ್ಲಿನ ಅನೇಕ ಕೆಟ್ಟ ಆಚರಣೆಗಳು, ಅನಿಷ್ಟ ಪದ್ಧತಿಗಳ ಬಗ್ಗೆ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಿದ್ದಾರೆ. ಸಮಾಜದಲ್ಲಿ ಬಡವರು ಬಲ್ಲಿದರ ಮೇಲೆ ಆಗುತ್ತಿರುವ ದೌರ್ಜನ್ಯಗಳ ಬಗ್ಗೆ ಬೆಳಕು ಚಲ್ಲಿದ್ದಾರೆ. ಅನಾದಿಕಾಲದಿಂದಲೂ ಆಡಳಿತ ವರ್ಗ ಮತ್ತು ಪುರೋಹಿತಶಾಹಿ ವರ್ಗಗಳನ್ನು ಆಳ್ವಿಕೆ ಮಾಡಿಕೊಂಡು ಬಂದಿದ್ದು ತಮಗಿಷ್ಟ ಬಂದಂತೆ ಸಮಾಜದಲ್ಲಿ ತಪ್ಪು ಕಲ್ಪನೆಗಳು ಮತ್ತು ಕೆಟ್ಟ ಆಚರಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಹಾಗೆಯೇ ಪ್ರಜಾಪ್ರಭುತ್ವದಲ್ಲಿಯೂ ಕೂಡ ಜನನಾಯಕ ಎನಿಸಿಕೊಂಡವರು ಜನರ ಸೇವೆ ಮಾಡದೆ ಅಧಿಕಾರಕ್ಕಾಗಿ ಜನರನ್ನು ತಪ್ಪುದಾರಿಗೆಳೆಯುತ್ತಿದ್ದಾರೆ ಎಂಬುದನ್ನು ತಮ್ಮ ಸಿನಿಮಾಗಳಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇವರು ನಿರ್ದೇಶಣ ಮಾಡಿರುವ ಎಲ್ಲಾ ಸಿನಿಮಾದಲ್ಲಿಯೂ ಕೂಡ ದೈವಾಧಿಕಾರ, ಧರ್ಮಾಧಿಕಾರ, ಜ್ಞಾನಾಧಿಕಾರ, ಪುರುಷಾಧಿಕಾರ, ಮತ್ತು ರಾಜ್ಯಾಧಿಕಾರಗಳನ್ನು ದುರುಪಯೋಗ ಮಾಡಿಕೊಂಡು ಸಮಾಜದಲ್ಲಿ ಶೋಷಣೆ ನಡೆಯುತ್ತಿದೆ ಎನ್ನುವುದನ್ನ ನೇರವಾಗಿ ತೋರಿಸಿದ್ದಾರೆ. ಸಮಾಜದಲ್ಲಿ ನಾವು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೂ ಇರುವ ಏಕೈಕ ಪರಿಹಾರ ಎಂದರೆ ಅದು ಅಕ್ಷರ ಜ್ಞಾನ, ಆ ಅಕ್ಷರ ಜ್ಞಾನ ಇದ್ದಾಗ ಆ ವ್ಯಕ್ತಿ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಮನುಷ್ಯನಲ್ಲಿ ಪ್ರಶ್ನೆಗಳು ಮೂಡಿದಾಗ ಆತನ ಮೇಲಾಗುತ್ತಿರುವ ದಬ್ಬಾಳಿಕೆಗಳ ಅರಿವಾಗುತ್ತದೆ ಎಂದು ತಮ್ಮ ಚಿತ್ರಗಳಲ್ಲಿ ಮಾರ್ಮಿಕವಾಗಿ ಶಿಕ್ಷಣದ ಮಹತ್ವವನ್ನ ಸಾರಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಗುಂಡಪ್ಪ ವೈಜಪ (2015) *'ಕನ್ನಡ ಚಲನಚಿತ್ರರಂಗಕ್ಕೆ ಶಂಕರನಾಗ್ ಕೊಡುಗೆ ಸಂಶೋಧನ ಗ್ರಂಥ'*
2. ಸತೀಶ್ ಕುಲಕರ್ಣಿ, *'ಬರಗೂರು ರಾಮಚಂದ್ರಪ್ಪ ಬಂಡಾಯದ ಗಟ್ಟಿದನಿ'*, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಬರಗೂರು ರಾಮಚಂದ್ರಪ್ಪ, *'ಸಿನಿಮಾ ಮತ್ತು ಸಾಹಿತ್ಯ'*, ಅಂಕಿತ ಪ್ರಕಾಶನ ಬೆಂಗಳೂರು.
4. ಮಾನಸ (2008) *'ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ'* ಸಂಶೋಧನ ಗ್ರಂಥ.
5. ಡಾ. ಜಿ. ಪ್ರಶಾಂತ್ ನಾಯಕ, *'ಚಿಂತನ ಚಿತ್ತ'*, ಡಾ. ಜಿ. ಪ್ರಶಾಂತ್ ನಾಯಕ ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.
6. ಡಾ. ಎ. ವಿ. ಲಕ್ಷ್ಮಿ ನಾರಾಯಣ (2016), *'ಸೃಜನಶೀಲ ಚಿಂತಕ ಬರಗೂರು'*, ಅಭಿರುಚಿ ಪ್ರಕಾಶನ, ಮೈಸೂರು.
7. ಗಂಗಾಧರ ಮೊದಲಿಯಾರ್, *ಕನ್ನಡ ಸಿನಿಮಾ*
8. ಬರಗೂರು ರಾಮಚಂದ್ರಪ್ಪ, ಶಬರಿ
9. ಬರಗೂರು ನಿರ್ದೇಶನದ ಚಿತ್ರಗಳು, *ಕೋಟೆ, ಸೂರ್ಯ, ಹಗಲುವೇಷ, ಶಬರಿ, ಕರಡಿಪುರ*